

# ಸಿಹಿ ಕಹಿ

ಸಂಪಾದಕರು : ಮಾರುತಿ ಬಸವಂತಪ್ಪ ಹೊಸಮನಿ
Editor : MARUTI BASAVANTAPPA HOSAMANI
Cell : +91 9741319119

ಕನ್ನಡ ದಿನಪತ್ರಿಕೆ, ಬಾಗಲಕೋಟೆ
ಬಾಗಲಕೋಟೆಯಿಂದ ಪ್ರಕಟಿತ
RNI REG No. : KARKAN/2016/75068

SIHI KAHI
KANNADA DAILY MORNING
BAGALKOT

Volume : 07 Issue : 127 Tuesday 21-01-2025 E-mail : maruti.b.hosamani76@gmail.com Page: 4 Price : Rs. 1/-


## “ಭೂಮಿಯ ಮೇಲಿನ ಭಗವಂತರು”..... (ಶ್ರೀ ಶಿವಕುಮಾರ ಮಹಾಸ್ವಾಮಿಜಿಗಳು)



ಧರೆಗೆ ನಕ್ಷತ್ರವಾಗಿ ಬಂದೆ ಗುರುವೇ
ಶಿವಣ್ಣನಾಗಿ
ಹೊನ್ನೇಗೌಡ-ಗಂಗಮ್ಮರ ಮುದ್ದಿನ
ಕಂದನಾಗಿ
1907 ಏಪ್ರಿಲ್ 1 ರಲ್ಲಿ ಮಹಾ
ಚೇತನವಾಗಿ
ಬದಲಾಯಿಸಿದಿರಿ ನಡೆದ ದಾರಿಯನ್ನೇ ಸ್ವರ್ಗವಾಗಿ

ಕಲಿಯುಗದ ನಡೆದಾಡುವ ನಿಜ ದೇವರಾಗಿ
ಹಗಲಿರುಳೆನ್ನದೆ ಬಡ ಮಕ್ಕಳಿಗಾಗಿ ದುಡಿದ ಕಾಯಕಯೋಗಿ
ಅನ್ನ,ಜ್ಞಾನ ಹಾಗೂ ಅಕ್ಷರದ ತ್ರಿವಿಧ ದಾಸೋಹಿಯಾಗಿ
ಆಧ್ಯಾತ್ಮಿಕ ನಾಯಕ ಸಿದ್ದಗಂಗಾ ಮಠದ ಮಹಾಯೋಗಿ

ರಾಮನಗರದ ಮಾಗಡಿಯ ವೀರಾಪುರದ ಉಸಿರು
ಬೆಳಗಿಸಿದಿರಿ ನಾಡಿನೆಲ್ಲೆಡೆ ಸಿದ್ದಗಂಗೆಯ ಹೆಸರು
ಪದ್ಮಭೂಷಣ ಪಡೆದ ತುಮಕೂರಿನ ಕಲ್ಪತರು
ಜಾತಿ ಮತ ಪಂಥವ ಮೀರಿ ಬೆಳೆದ ಕರುನಾಡಿನ ರತ್ನರು

ಲಕ್ಷಾಂತರ ಮಕ್ಕಳಿಗೆ ಅಕ್ಷರವ ಕಲಿಸಿದವರು
ಯಾರೂ ಏರಲಾರದ ಎತ್ತರಕೆ ಏರಿದವರು
ಅಜ್ಞಾನವ ತೊಲಗಿಸಿ ಜ್ಞಾನ ಪಸರಿಸಿದವರು
ಮೌನ ಮಾತಿನಿಂದ ಜಗಕೆ ಜ್ಯೋತಿಯಾದವರು

ದೇವರಂತೆ ಬೆಳಕಾಗಿ ಪೂಜ್ಯರಂತೆ ನೆರಳಾಗಿ
ತಂದೆಯಂತೆ ಆಶ್ರಯವಾಗಿ ತಾಯಿಯಂತೆ ಕರುಣಾಮಯಿಯಾಗಿ
ಬಸವಣ್ಣನಂತೆ ಆದರ್ಶವಾಗಿ ವಿವೇಕಾನಂದರಂತೆ ಮಾದರಿಯಾಗಿ
ಸಂತನಂತೆ ಮಹಾ ಸಿದ್ಧಿಗಾಗಿ ಜ್ಞಾನಿಯಂತೆ ದಾರಿದೀಪವಾಗಿ

**(ಸರ್ವರಿಗೂ ದಾಸೋಹ ದಿನದ ಭಕ್ತಿ ಪೂರ್ವಕ ಶುಭಾಶಯಗಳು)**

**-ಶ್ರೀ ಮುತ್ತು.ಯ.ವಡ್ಡರ**
**ಬಾಗಲಕೋಟ**
**ಶ್ರೀ ಮಠದ ಹಳೆಯ ವಿದ್ಯಾರ್ಥಿ**
**9845568484**

# ಶಾಲಾ ಮಕ್ಕಳಲ್ಲಿ ರಾಷ್ಟ್ರೀಯ ವಿವಿಧ ಆರೋಗ್ಯ ಕಾರ್ಯಕ್ರಮಗಳ ಜಾಗೃತಿ

**ಸಿಹಿ ಕಹಿ ಸುದ್ದಿ**
**ಗುಂಡನಪಲ್ಲೆ :** ಜಿಲ್ಲಾ ಆರೋಗ್ಯಮತ್ತು ಕುಟುಂಬ ಕಲ್ಯಾಣ ಇಲಾಖೆ ಬಾಗಲಕೋಟ, ಸಾರ್ವಜನಿಕ ಶಿಕ್ಷಣ ಇಲಾಖೆ, ಪ್ರಾಥಮಿಕ ಆರೋಗ್ಯ ಕೇಂದ್ರ ಶಿರೂರ ಸಹಯೋಗದಲ್ಲಿ, ಗುಂಡನಪಲ್ಲೆ ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಹದಿ ಹರಯದವರ ಆರೋಗ್ಯ ಸಮಸ್ಯೆಗಳ ಸ್ನೇಹಾ ಕ್ಲಿನಿಕ್ ಶಾಲಾ ಮಕ್ಕಳಲ್ಲಿ ಆರೋಗ್ಯ ಜಾಗೃತಿ ಆಯೋಜಿಸಲಾಗಿತ್ತು. ಶಾಲಾ ಮುಖ್ಯ ಶಿಕ್ಷಕ ಸಂಗಪ್ಪ ಹುನಗುಂದ ಅಧ್ಯಕ್ಷತೆ ವಹಿಸಿದ್ದರು. ಅತಿಥಿಗಳಾಗಿ ಆರೋಗ್ಯ ನಿರೀಕ್ಷಣಾಧಿಕಾರಿ ಎಸ್.ಎಸ್ ಅಂಗಡಿಯವರು ಭಾಗವಹಿಸಿ ಆರೋಗ್ಯ ಇಲಾಖೆ ರಾಷ್ಟ್ರೀಯ ವಿವಿಧ ಆರೋಗ್ಯ ಕಾರ್ಯಕ್ರಮಗಳ ಬಗ್ಗೆ ಮಕ್ಕಳಲ್ಲಿ ಜಾಗೃತಿ ಮೂಡಿಸಿದರು. ವೈಯಕ್ತಿಕ ಸ್ವಚ್ಛತೆ, ಸುತ್ತ ಮುತ್ತ ಪರಿಸರ ಸ್ವಚ್ಛತೆ ಕೀಟ ಜನ್ಯ ರೋಗಗಳಾದ ಮಲೇರಿಯಾ ಡೆಂಗ್ಯೂ ಚಿಕೂನ್ ಗುನ್ಯಾ, ಮೇದಳು ಜ್ವರ ಆನೇಕಾಲು ರೋಗಗಳ ನಿಯಂತ್ರಣ ಮುಂಜಾಗ್ರತೆಯಾಗಿ ಸೊಳ್ಳೆ ಉತ್ಪತ್ತಿ ತಾಣಗಳ ನಿರ್ಮೂಲನೆ ಸೊಳ್ಳೆ ನಿರೋಧಕ ಬಳಸ ಬೇಕು ಸೊಳ್ಳೆ ಪರದೆ ಉಪಯೋಗ ಸೊಳ್ಳೆಗಳ ಕಡಿತ ತಪ್ಪಿಸಿ ಕೊಳ್ಳಬೇಕು ಯಾವುದೇ ತರಹದ ಜ್ವರ ಕಾಣಿಸಿದರೆ ತಕ್ಷಣ ಸರಕಾರಿ ಆಸ್ಪತ್ರೆಯಲ್ಲಿ ರಕ್ತ ಪರೀಕ್ಷೆ ಮಾಡಿಸಬೇಕು ಪರೀಕ್ಷೆ ಚಿಕಿತ್ಸೆ ಉಚಿತವಾಗಿರುತ್ತದೆ. ಆರೋಗ್ಯ ಇಲಾಖೆ ಆರೋಗ್ಯ ನಿರೀಕ್ಷಣಾಧಿಕಾರಿಗಳು, ತಮ್ಮ ಮನೆಗೆ ಬಂದಾಗ ಯಾವುದೇ ಆರೋಗ್ಯ ಸಮಸ್ಯೆಗಳಿಗೆ ಸರಿಯಾಗಿ ಮಾಹಿತಿ ನೀಡಿ ಸಲಹೆ ಪಡೆಯಬೇಕು ಹದಿ ಹರಯದವರಲ್ಲಿ ಅನೇಕ ಆರೋಗ್ಯ



ಸಮಸ್ಯೆಗಳು ಇರುತ್ತವೆ ತಲೆನೋವು, ಬೆಳವಣಿಗೆ ಕುಂಠಿತ, ರಕ್ತ ಹೀನತೆ, ಮಾನಸಿಕ ವ್ಯಥೆ, ಭಯ ಯಾವುದೇ ತರಹ ಆರೋಗ್ಯ ಸಮಸ್ಯೆಗಳಿದ್ದವರು ಪ್ರತಿ ಶುಕ್ರವಾರ ಹತ್ತಿರದ ಸರಕಾರಿ ಆಸ್ಪತ್ರೆಯಲ್ಲಿ ಜರಗುವ ಸ್ನೇಹ ಕ್ಲಿನಿಕ್ ಭೇಟಿ ನೀಡಿ ತಜ್ಞ ವೈದ್ಯರ ಸಲಹೆ ಚಿಕಿತ್ಸೆ ಸೌಲಭ್ಯ ಹದಿ ಹರಯದ ವಿದ್ಯಾರ್ಥಿಗಳು ಸದುಪಯೋಗ ಪಡೆದು ಕೊಳ್ಳಬೇಕು ಹಾಗೂ ಉಚಿತ ಆರೋಗ್ಯ ಸಲಹೆಗಳಿಗಾಗಿ 104 ಕರೆ ಮಾಡಿ ಆರೋಗ್ಯ ಸಲಹೆ ಪಡೆಯಿರಿ ಎಂದು ಶಾಲಾ ಮಕ್ಕಳಲ್ಲಿ ಆರೋಗ್ಯ ಜಾಗೃತಿ ಮೂಡಿಸಿದರು. ಶಾಲಾ ಮುಖ್ಯ ಶಿಕ್ಷಕ ಸಂಗಪ್ಪ ಅವರು ಮಾತನಾಡಿ ನಿಮ್ಮ ಮನೆಯ ಬಾಗಿಲಿಗೆ ಬರುವ ಆರೋಗ್ಯ ಅಧಿಕಾರಿಗಳ ಆರೋಗ್ಯ ಸಲಹೆ ಚಿಕಿತ್ಸೆ ಸದುಪಯೋಗ ಪಡಿಸಿಕೊಂಡು ಸಮಾಜ ಕುಟುಂಬದ ಸದಸ್ಯರು ಆರೋಗ್ಯ ಇಲಾಖೆಯ ಪ್ರತಿಯೊಂದು ರಾಷ್ಟ್ರೀಯ ಆರೋಗ್ಯ ಕಾರ್ಯಕ್ರಮಗಳ ಮಾಹಿತಿ ಪಡೆದು ಆರೋಗ್ಯವಂತ ಸಮಾಜ ನಿರ್ಮಾಣ ಮಾಡಲು ನಾವೆಲ್ಲರೂ ಕೈಜೋಡಿಸೋಣ ಎಂದರು. ರಾಷ್ಟ್ರೀಯ ವಿವಿಧ ಆರೋಗ್ಯ ಕಾರ್ಯಕ್ರಮದಲ್ಲಿ ಶಾಲಾ ಶಿಕ್ಷಕರಾದ ಆರ್.ಬಿ ಅಂಟರತಾನಿ, ಪರಶುರಾಮ ಎಮ್ ಗುರು ಮಾತೆಯರಾದ ಭಾರತಿ ಗಣಿಯಾರ, ಅನಿತಾ ಪಾಟೀಲ್ ಸುನಿತಾ ಮಾಸ್ತಿ ಬಿಸಿ ಊಟದ ಕಾರ್ಯಕ್ರಮದ ಸಿಬ್ಬಂದಿಗಳು ಶಾಲಾ ಮುದ್ದು ಮಕ್ಕಳು ಭಾಗವಹಿಸಿದ್ದರು.


# ತಾಯಿಯಿಂದ ಬೇರ್ಪಟ್ಟ ಮೂರು ಕಾಡು-ಬೆಕ್ಕಿನ ಮರಿಗಳು ಪ್ರತ್ಯಕ್ಷ

**ಸಿಹಿ ಕಹಿ ಸುದ್ದಿ**
**ರೋಣ :** ತಾಲೂಕಿನ ಹೊಳೆ ಹಡಗಲಿ ಗ್ರಾಮದ ಗದ್ದೆಯಲ್ಲಿ ಕಬ್ಬು ಕಟಾವು ಮಾಡುತ್ತಿದ್ದ ವೇಳೆ ತಾಯಿಯಿಂದ ಬೇರ್ಪಟ್ಟ ಮೂರು ಕಾಡು ಬೆಕ್ಕಿನ ಮರಿಗಳು ನಡಗುತ್ತಾ ನಿಂತಿದ್ದನ್ನು ರೈತರಾದ ಭೀಮಪ್ಪ ಹೂಗಾರ ಹಾಗೂ ನಿಂಗನಗೌಡ ಕೆಂಚನಗೌಡ್ರ ನೋಡಿ ತಕ್ಷಣ ಜೀವ ವೈವಿಧ್ಯ ಸಂಶೋಧಕರಾದ ಮಂಜುನಾಥ ನಾಯಕ ಅವರಿಗೆ ತಿಳಿಸಿದ್ದಾರೆ.

ಮಂಜುನಾಥ ನಾಯಕ ಅವರು ಅರಣ್ಯ ಇಲಾಖೆ ಸಹಾಯಕ ಅರಣ್ಯಾಧಿಕಾರಿ ಅನ್ವರ ಕೋಲ್ದಾರ್ ಜೊತೆ ಗೂಡಿ ಘಟನಾ ಸ್ಥಳಕ್ಕೆ ಆಗಮಿಸಿ ಕಬ್ಬು ಕಟಾವು ಮಾಡುವ ಮಷಿನ್ ಬಂದ್ ಮಾಡಿಸಿದ್ದಾರೆ. ಕಬ್ಬು ಕಟಾವು ಮಾಡುವ ಮಷಿನ್ ಶಬ್ದಕ್ಕೆ ಹೆದರಿ ತಾಯಿ ಬೆಕ್ಕು ಮರಿಗಳಿಂದ ದೂರು ಉಳಿದಿತ್ತು. ಯಾವಾಗ ಕಬ್ಬು ಕಟಾವು ಮಷಿನ್ ಬಂದ್ ಆದ ತಕ್ಷಣ ತಾಯಿ ಬೆಕ್ಕು ಬಂದು ತನ್ನ ಮರಿಗಳನ್ನು ಒಂದೊಂದಾಗಿ ತೆಗೆದು ಕೊಂಡು ಹೋದ ಘಟನೆ ನಡೆದಿದೆ.

ಕಾಡು ಬೆಕ್ಕು ಮರಗಳ ಪೊಟರೆಯಲ್ಲಿ ಬದುಕುತ್ತವೆ. ಇವು ಮೊಲ, ಹಕ್ಕಿ, ಹಾವು, ಮೀನುಗಳನ್ನು ತಿನ್ನುತ್ತವೆ. ಇವು ಜನವರಿ ಯಿಂದ ಏಪ್ರಿಲ್ ತಿಂಗಳಲ್ಲಿ ಮೂರರಿಂದ ಐದು ಮರಿಗಳಿಗೆ ಜನ್ಮ ನೀಡುತ್ತವೆ ಎಂದು ವರದಿಯಾಗಿದೆ.

**ಜಿಲ್ಲಾ ವರದಿಗಾರರು, ಸಿಹಿ ಕಹಿ ಕನ್ನಡ ದಿನ ಪತ್ರಿಕೆ ಹಾಗೂ ಎಸ್.ಕೆ ನ್ಯೂಸ್ ಕನ್ನಡ ಚಾನಲ್:ಎಸ್.ವಿ ಸಂಕನಗೌಡ್ರ, ರೋಣ ಗದಗ**



# ಮಹಿಳೆಯರು ಸ್ವಾವಲಂಬನೆಯಾಗಿ ಬದುಕಿ: ಜಯಂತಿ ನಾಯಕ



**ಇಂಡಿ :** ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ (ಟ್ರಸ್ಟ್) ಇಂಡಿ ತಾಲೂಕು ಮಟ್ಟದ ಮಹಿಳಾ ವಿಚಾರಗೋಷ್ಠಿ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಇಂಡಿ ತಾಲ್ಲೂಕಿನ ತಡವಲಗಾ ಗ್ರಾಮದ ಜೋಡಗುಡಿ ಶ್ರೀ ಮರುಳಸಿದ್ದೇಶ್ವರ ದೇವಾಲಯದ ಆವರಣದಲ್ಲಿ ನಡೆಯಿತು.ಈ ಕಾರ್ಯಕ್ರಮ ವಿಜಯಪೂರ ಪೊ?ಲಿಸ್ ಹೇಡ್ ಕಾನ್ಸ್ಟೇಬಲ್ ಶ್ರೀಮತಿ ಜಯಂತಿ ನಾಯಕ ಅವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.ನಂತರ ಮಾತನಾಡಿದ ಅವರು ಭಾರತ ಭವ್ಯವಾದ ಸಂಸ್ಕೃತಿಯನ್ನು ಹೊಂದಿರುವ ರಾಷ್ಟ್ರವಾಗಿದೆ.ಇಲ್ಲಿ ಮಹಿಳೆಯರಿಗೆ ಹೆಚ್ಚಿನ ಸ್ಥಾನವಿದೆ,ಮಹಿಳಿಯರು ಈ ಸಮಾಜದಲ್ಲಿ ಧೈರ್ಯವಾಗಿ ಇರಬೇಕು, ಮಕ್ಕಳಿಗೆ ಸಂಸ್ಕಾರಯುತ್ತವಾದ ಶಿಕ್ಷಣ ನೀಡಬೇಕು. ಯಾರನ್ನು ಅತಿಯಾಗಿ ನಂಬಬೇಡಿ ತಮ್ಮ ಯಾವುದೇ ಸಮಯದಲ್ಲಿ ಸಿಲುಕಿದಾಗ ತಕ್ಷಣವೇ ಪೊ?ಲಿಸ್ ಇಲಾಖೆ ಸಾಹಯವಾಣಿ 112 ಕ್ಕೆ ಕರೆ ನಾವು ನಿಮ್ಮ ನೆರವಿಗೆ ಬರುತ್ತದೆ,ತಮ್ಮ ಮೇಲೆ ದೌರ್ಜನ್ಯಕ್ಕೆ ಬಂದ ವ್ಯಕ್ತಿಗಳನ್ನು ಹೇಗೆ ಎದುರಿಸಬೇಕು ಎಂಬುದನ್ನು ಪ್ರಾಯೋಗಿಕವಾಗಿ ಮಾಡಿ ನೆರೆದ ಮಹಿಳಿಯರ ಮೆಚ್ಚುಗೆ ಪಾತ್ರರಾದರು.ಈ ಸಂದರ್ಭದಲ್ಲಿ ಇಂಡಿ ತಾಲೂಕು ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನಾ ಅಧಿಕಾರಿ ನಟರಾಜ್ ಎಲ್ ಎಂ ಮಾತನಾಡಿ ಮಹಿಳೆಯರನ್ನು ಸಾಮಾಜಿಕವಾಗಿ ಆರ್ಥಿಕವಾಗಿ ಮುಂದೆ ತರಲು ನಮ್ಮ ಸಂಘದಿಂದ ಅನೇಕ ಬಗೇಯ ಯೋಜನೆಯಗಳನ್ನುಜಾರಿಗೆತಂದಿದ್ದುನಾವುಸಾಲದ ರೂಪದಲ್ಲಿ ಹಣ ನೀಡಿ ಮಹಿಳಿಯರ ಸ್ವಾವಲಂಬನೆ ಬದುಕುಹಸನಾಗಿಸಲುನಮ್ಮಸಂಘಸದಾಸಿದ್ಧವಾಗಿದೆ ಎಂದು ಹೇಳಿದರು, ಉಪನ್ಯಾಸಕರಾದ ಸುರೇಶ ಗೌಡಪ್ಪಗೋಳ ಭಾರತದಲ್ಲಿ ತಾಯಿಯಂದಿರಗೆ ದೇವತೆ ಎಂತೆ ಗೌರವಿಸುತ್ತಾರೆ ಭಾರತೀಯ ಮಹಿಳೆಯ ಸಂಸ್ಕೃತಿ ಇಡೀ ಜಗತ್ತು ಮೆಚ್ಚುವಂಥದ್ದು ಎಂದು ಹೇಳಿದರು. ತಮ್ಮಣ್ಣ ಪೂಜಾರಿ ಅವರು ಮಾತನಾಡಿ ಮಕ್ಕಳಿಗೆ ಸಂಸ್ಕಾರಯುತ್ತವಾದ ಶಿಕ್ಷಣ ನೀಡಬೇಕು, ಮಕ್ಕಳ ಬೆಳವಣಿಗೆಯಲ್ಲಿ ತಾಯಿ ಪಾತ್ರ ಬಹುಮುಖ್ಯವಾದ್ದು ಎಂದು ಹೇಳಿದರು.ಈ ಪತ್ರಕರ್ತರಾದ ಸಚೀನ ಇಂಡಿ ಸೇರಿದಂತೆ ಅನೇಕರು ಮಾತನಾಡಿದರು, ಪೊ?ಲಿಸ್ ಕಾನ್ಸ್ಟೇಬಲ್ ಸಂಗೀತಾ ಶೆಡಬಾಳ, ತಡವಲಗಾ ವಲಯ ಮೇಲ್ವಿಚಾರಕರಾದ ಅಶ್ವಿನಿ, ಜೈವಿಕ ,ತಾಂಬಾ ವಲಯ ಸವಿತಾ ಆರ್ ಕೆ, ಸುರೇಶಗೌಡ ಗೌಡಪ್ಪಗೊಳ,ಮಳಸಿದ್ದಪ್ಪ ಖಿಸ್ಕಿ, ಶ್ರೀಶೈಲ ಇಂಡಿ, ಶಶಿಧರ ಬಡಿಗೇರ ಶಿಕ್ಷಕರಾದ ಶಂಕರ ಗೀಡಘಂಟಿ,ಆನಂದ ಮೋರೆ,ಸೇರಿದಂತೆ ಅನೇಕರು ಉಪಸ್ಥಿತರಿದ್ದರು.ನಂತರ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಎಲ್ಲಾ ಮಹಿಳಿಯರಿಗೆ ಬಹುಮಾನ ವಿತರಣೆ ಮಾಡಲಾಯಿತು.ಈ ಕಾರ್ಯಕ್ರಮದಲ್ಲಿ ಇಂಡಿ ಮತ್ತು ಚಡಚಣ ತಾಲೂಕು ಮಹಿಳಾ ಸಂಘಟನೆಗಳ ಮಹಿಳಾ ಸದಸ್ಯರು ಉಪಸ್ಥಿತರಿದ್ದರು.

# ಇಟ್ಟಂಗಿಹಾಳ ಬಳಿ ಮೈಸೂರು ಸ್ಯಾಂಡಲ್ ಸೋಪ್ ಉತ್ಪಾದನೆ ಘಟಕಕ್ಕೆ 10 ಎಕರೆ ಜಮೀನು: ಸಚಿವ ಎಂ.ಬಿ. ಪಾಟೀಲ ಘೋಷಣೆ

**ವಿಜಯಪುರ :** ನಗರದ ಹೊರವಲಯದ ಇಟ್ಟಂಗಿಹಾಳ ಬಳಿ ಮೈಸೂರು ಸ್ಯಾಂಡಲ್ ಸೋಪ್ ಉತ್ಪಾದನೆ ಘಟಕ ಸ್ಥಾಪಿಸಲು 10 ಎಕರೆ ಜಮೀನು ನೀಡುವುದಾಗಿ ಬೃಹತ್ ಮತ್ತು ಮಧ್ಯಮ ಕೈಗಾರಿಕೆ, ಮೂಲಸೌಲಭ್ಯ ಅಭಿವೃದ್ಧಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಘೋಷಿಸಿದ್ದಾರೆ.

ಶನಿವಾರ ನಗರದಲ್ಲಿ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ ಆಯೋಜಿಸಿರುವ ಮೈಸೂರು ಸ್ಯಾಂಡಲ್ ಸಾಬೂನು ಮೇಳ ಉದ್ಘಾಟಿಸಿ ಅವರು ಮಾತನಾಡಿದರು.

ಕಾರ್ಯಕ್ರಮದ ಪ್ರಾರಂಭದಲ್ಲಿ ಮಾತನಾಡಿದ ನಾಗಠಾಣ ಶಾಸಕ ವಿಠ್ಠಲ ಕಟಕದೊಂಡ, ಸಚಿವ ಎಂ.ಬಿ. ಪಾಟೀಲ ಅವರು ಕೈಗಾರಿಕೆ ಸಚಿವರಾಗಿ ಜಿಲ್ಲೆಯ ಸವಾರ್ಂಗೀಣ ಅಭಿವೃದ್ಧಿಗೆ ಸಾಕಷ್ಟು ಒತ್ತು ನೀಡಿದ್ದು,ನಷ್ಟದಲ್ಲಿದ್ದ ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತವನ್ನು ಲಾಭಕ್ಕೆ ತಂದಿದ್ದಾರೆ. ಮುಂದಿನ ಸಂಕ್ರಾಂತಿಯೊಳಗೆ ವಿಜಯಪುರ ಜಿಲ್ಲೆಯಲ್ಲಿಯೇ ಒಂದು ಸಾಬೂನು ಕಾರ್ಖಾನೆ ಘಟಕ ಪ್ರಾರಂಭಿಸಬೇಕು. ಇದರಿಂದ ನೂರಾರು ಯುವಕರಿಗೆ ಉದ್ಯೋಗ ಸಿಗಲಿದೆ ಎಂದು ಮನವಿ ಮಾಡಿದರು.

ಆಗ ತಕ್ಷಣ ಸ್ಪಂದಿಸಿದ ಸಚಿವ ಎಂ. ಬಿ. ಪಾಟೀಲ ಅವರು, ಇಟ್ಟಂಗಿಹಾಳ ಬಳಿ 10 ಎಕರೆ ಜಮೀನು ನೀಡಲಾಗುವುದು. ಒಂದೆರಡು ದಿನಗಳಲ್ಲಿ ಈ ನಿಟ್ಟಿನಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದು ಘೋಷಿಸಿದರು.

ಮೈಸೂರು ಮಹಾರಾಜರು ನೀರಾವರಿಗಾಗಿ ಕೆ.ಆರ್.ಎಸ್. ಡ್ಯಾಂ, ಕೈಗಾರಿಕೆಗಾಗಿ ಕೆ.ಎಸ್.ಡಿ.ಎಲ್. ಮತ್ತು ಶಿಕ್ಷಣಕ್ಕಾಗಿ ನಾನಾ ಸಂಸ್ಥೆಗಳನ್ನು ಪ್ರಾರಂಭಿಸಿ ರಾಜ್ಯದ



ಅಭಿವೃದ್ಧಿಗೆ ಮುನ್ನುಡಿ ಬರೆದಿದ್ದಾರೆ. ಅವರು ಪ್ರಾರಂಭಿಸಿರುವ ಮೈಸೂರು ಸ್ಯಾಂಡಲ್ ಸೋಪ್ ಜಗತ್ತಿನಾದ್ಯಂತ ಅದರದೇ ಜನಪ್ರಿಯತೆ ಹೊಂದಿದೆ. ಈ ಹಿಂದೆ ರಾಜ್ಯದ ಜನರ ಮನಗಳಲ್ಲಿ ಸ್ಥಾನ ಪಡೆದಿದ್ದ ಸಾಬೂನು ಇತ್ತೀಚೆಗೆ ಗೊಂದಲದಿಂದ ಕೂಡಿ ಅಪಖ್ಯಾತಿ ಪಡೆದಿತ್ತು. ನಾನು ಸಚಿವನಾದ ನಂತರ ಸೂಕ್ತ ಕ್ರಮ ಕೈಗೊಂಡು ಡಿಎ ಪ್ರಶಾಂತ ಅವರನ್ನು ಎಂಡಿ ಮಾಡಿ ಪುನಶ್ಚೇತನಕ್ಕೆ ಕ್ರಮ ಕೈಗೊಂಡು ಸುಮಾರು 20 ಹೊಸ ಉತ್ಪನ್ನಗಳನ್ನು ಹೊರ ತಂದು ಸಂಸ್ಥೆಯನ್ನು ಗತವೈಭವಕ್ಕೆ ತರಲು ಪ್ರಯತ್ನಿಸುತ್ತಿದ್ದೇವೆ. ರಾಜ್ಯದ ಕಿರಾಣಿ ಅಂಗಡಿಗಳಿಂದ ಹಿಡಿದ ದೇಶ, ವಿದೇಶಗಳಲ್ಲಿ ನಮ್ಮ ಮಳಿಗೆ ಸ್ಥಾಪಿಸಿ ಅಂತಾರಾಷ್ಟ್ರೀಯ ಮಟ್ಟದಲ್ಲಿ ಪರಿಚಯಿಸಲು ಕ್ರಮ ಕೈಗೊಳ್ಳಲಾಗಿದೆ. ನಮ್ಮ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಲ್ಲಿ ಕಲಾಲೋಕ ಸ್ಥಾಪಿಸಿ ಅಲ್ಲಿ ಈ ಉತ್ಪನ್ನಗಳನ್ನು ಪರಿಚಯಿಸಲಾಗುವುದು. ನಮ್ಮ ಉತ್ಪನ್ನಗಳು ಅಂತಾರಾಷ್ಟ್ರೀಯ ಮಟ್ಟದಲ್ಲಿ ಹೆಸರು ಮಾಡಲು ಎಲ್ಲ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. ಕೆ.ಎಸ್.ಡಿ.ಎಲ್ ಅಧ್ಯಕ್ಷ ಸಿ. ಎಸ್ ನಾಡಗೌಡ ಕೂಡ ಈಗ ಕಂಪನಿಯ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ ಎಂದು ಅವರು ಹೇಳಿದರು.

ಕೆ.ಎಸ್.ಡಿ.ಎಲ್ ಸಂಸ್ಥೆಯ ಅಧ್ಯಕ್ಷ ಸಿ. ಎಸ್. ನಾಡಗೌಡ ಮಾತನಾಡಿ, ಇಂದಿನ ಪೈಪೊ?ಟಿಯ ಯುಗದಲ್ಲಿ ನಾವೂ ಕೂಡ ನಮ್ಮ ಗುಣಮಟ್ಟದ ಉತ್ಪನ್ನಗಳನ್ನು ಪರಿಚಯಿಸಿ, ಪ್ರಚಾರ ಮಾಡಿ, ಮನೆಮನೆಗೆ ತಲುಪಿಸುವ ಮೂಲಕ ಇತರ ಕಂಪನಿಗಳಿಗೆ ಸ್ಪರ್ಧೆಗಿಳಿಯಬೇಕು.


ಜಾತ್ರೆ, ಸಾಂಸ್ಕೃತಿಕ ಮತ್ತಿತರ ಕಾರ್ಯಕ್ರಮಗಳಲ್ಲಿ ಸಾಬೂನು ಮೇಳ ಆಯೋಜಿಸಿ ರಿಯಾಯಿತಿ ದರದಲ್ಲಿ ಸಾಬೂನು ಮಾರಾಟ ಮಾಡಬೇಕು. ಈ ಮೂಲಕ ಬಹುರಾಷ್ಟ್ರೀಯ ಕಂಪನಿಗಳ ಪ್ರಚಾರಕ್ಕೆಪ್ರತಿಯಾಗಿನಮ್ಮವಸ್ತುಗಳಪ್ರಚಾರ ಕೈಗೊಳ್ಳಲಾಗುತ್ತಿದೆ. ಮೈಸೂರು ಸ್ಯಾಂಡಲ್ ಸೋಪಿನ ಗುಣಮಟ್ಟ ಎಂದೂ ಬದಲಾಗಿಲ್ಲ. ಅಗರಬತ್ತಿ,ಸೌಂದರ್ಯವರ್ಧಕವಸ್ತುಗಳು, ಬಟ್ಟೆ ಒಗೆಯುವ ಸಾಬೂನುಗಳು, ಧೂಪ್, ಸಾಮ್ರಾಣಿ ಸೇರಿದಂತೆ ಇನ್ನೂ ಹೆಚ್ಚು ಹೊಸ ಉತ್ಪನ್ನಗಳ ಪರಿಚಯಕ್ಕೆ ಸಚಿವ ಎಂ. ಬಿ. ಪಾಟೀಲರು ಸಾಕಷ್ಟು ಸಹಕಾರ ನೀಡುತ್ತಿದ್ದಾರೆ. ಉತ್ಪನ್ನಗಳ ಜನಪ್ರಿಯತೆಯಾಗಲು ಸಂಸ್ಥೆಯ ಸಕಲ ಸಿಬ್ಬಂದಿ ಕೊಡುಗೆಯೂ ಸಾಕಷ್ಟಿದೆ. ವಿಜಯಪುರದಲ್ಲಿಯೂ ಒಂದು ಘಟಕ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗುತ್ತಿದ್ದು, ಐದಾರು ತಿಂಗಳಲ್ಲಿ ಕಾರ್ಖಾನೆ ಪ್ರಾರಂಭಿಸಲು ಸಿದ್ಧತೆ ಮಾಡಲಾಗುವುದು ಎಂದು ತಿಳಿಸಿದರು.

ಶಾಸಕ ಬಸನಗೌಡ ಪಾಟೀಲ ಯತ್ನಾಳ ಮಾತನಾಡಿ, ವಿಜಯಪುರದಲ್ಲಿ ಕೆ.ಎಸ್.ಡಿ.ಎಲ್ ಘಟಕ ಸ್ಥಾಪಿಸುವ ಸಚಿವ ಎಂ. ಬಿ. ಪಾಟೀಲರ ನಿರ್ಧಾರ ಸ್ವಾಗತಾರ್ಹ. ಇದರಿಂದ 400 ಯುವಕರಿಗೆ ಉದ್ಯೋಗ ಸಿಗಲಿದೆ. ಇಂದು ನೀರಾವರಿಯಿಂದಾಗಿ ಜಿಲ್ಲೆ ಅಭಿವೃದ್ಧಿಯಾಗಿದೆ. ಮುಂದಿನ ವರ್ಷದಲ್ಲಿ ವಿಜಯಪುರದಲ್ಲಿಯೇ ರಾಜ್ಯದಲ್ಲಿ ಅತೀ ಹೆಚ್ಚು ಮೈಸೂರು ಸ್ಯಾಂಡಲ್ ಸೋಪ್ ಮಾರಾಟದಲ್ಲಿ ಮುಂಚೂಣಿಯಲ್ಲಿರಲಿದೆ. ನಾವೂ ಕೂಡ ಈ ಉತ್ಪನ್ನಗಳ ಪ್ರಚಾರ ಮಾಡುತ್ತೇವೆ ಎಂದು ತಿಳಿಸಿದರು.

ಕೆ.ಎಸ್.ಡಿ.ಎಲ್ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಶಾಂತ ಪಿ. ಕೆ. ಎಂ ಪ್ರಾಸ್ತಾವಿಕವಾಗಿ ಮಾತನಾಡಿದರು.

ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿ ಟಿ. ಭೂಬಾಲನ್, ಎಸ್ಪಿ ಲಕ್ಷ್ಮಣ ನಿಂಬರಗಿ, ಜಿ. ಪಂ. ಸಿಇಒ ರಿಷಿ ಆನಂದ, ಆಡಳಿತ ಮತ್ತು ಮಾರುಕಟ್ಟೆ ವಿಭಾಗದ ಜನರಲ್ ಮ್ಯಾನೇಜರ್ ಎಂ. ಗಂಗಪ್ಪ, ಬೆಂಗಳೂರು ಕಚೇರಿಯ ಅಕೌಂಟ್ಸ್ ಮ್ಯಾನೇಜರ್ ರುದ್ರೇಶ ಬಿ. ಕೆ., ಕಿರಿಯ ಅಧಿಕಾರಿ ವಿಜಯಮಹಾಂತೇಶ ಕಾಮತ, ಶ್ರೀ ಸಿದ್ಧೇಶ್ವರ ಸಂಸ್ಥೆಯ ಸಂಗು ಸಜ್ಜನ, ಗುರು ಗಚ್ಚಿನಮಠ, ಕಾಪೆರ್‍ೂ?ರೇಟರ್ ರಾಜು ಮಗಿಮಠ, ಎಂ. ಎಸ್. ಕರಡಿ ಮುಂತಾದವರು ಉಪಸ್ಥಿತರಿದ್ದರು.

# ಬಬಲೇಶ್ವರ, ತಿಕೋಟಾ ತಾಲೂಕುಗಳ ಕಂದಾಯ ದಾಖಲೆಗಳ ಗಣಕೀಕರಣ ಕೇಂದ್ರಕ್ಕೆ ಸಚಿವ ಎಂ.ಬಿ. ಪಾಟೀಲ ಚಾಲನೆ



**ವಿಜಯಪುರ :** ಬಬಲೇಶ್ವರ ಮತ್ತು ತಿಕೋಟಾ ತಾಲೂಕುಗಳ ಕಂದಾಯ ದಾಖಲೆಗಳ ಗಣಕೀಕರಣ ಕೇಂದ್ರವನ್ನು ಕೈಗಾರಿಕೆ, ಮೂಲಸೌಲಭ್ಯಅಭಿವೃದ್ಧಿ ಹಾಗೂ ಜಿಲ್ಲಾಉಸ್ತುವಾರಿ ಸಚಿವ ಎಂ. ಬಿ. ಪಾಟೀಲ ಉದ್ಘಾಟಿಸಿದರು.

ವಿಜಯಪುರ ನಗರದ ಹಳೆಯ ತಹಸೀಲ್ದಾರ್ ಕಚೇರಿಯಲ್ಲಿ ನೂತನವಾಗಿ ಪ್ರಾರಂಭಿಸಲಾಗಿರುವ ಈ ಕೇಂದ್ರವನ್ನು ಸಚಿವರು ಶನಿವಾರ ಉದ್ಘಾಟಿಸಿದರು.

ಈ ಸಂದರ್ಭದಲ್ಲಿ ಕೆ.ಎಸ್.ಡಿ.ಎಲ್ ಅಧ್ಯಕ್ಷ ಮತ್ತು ಶಾಸಕ ಸಿ. ಎಸ್. ನಾಡಗೌಡ, ಶಾಸಕ ವಿಠ್ಠಲ ಕಟಕದೊಂಡ, ಜಿಲ್ಲಾಧಿಕಾರಿ ಟಿ. ಭೂಬಾಲನ್, ಜಿ. ಪಂ. ಸಿಇಒ ರಿಷಿ ಆನಂದ, ಅಪರ ಜಿಲ್ಲಾಧಿಕಾರಿ ಸೋಮನಿಂಗ ಗೆಣ್ಣೂರ, ಬಬಲೇಶ್ವರ ತಹಸೀಲ್ದಾರ ಸಂತೋಷ ಮ್ಯಾಗೇರಿ, ತಿಕೋಟಾ ತಹಸೀಲ್ದಾರ ಸುರೇಶ ಚವಲರ ಮುಂತಾದವರು ಉಪಸ್ಥಿತರಿದ್ದರು.

ಭೂಸುರಕ್ಷಾಯೋಜನೆಯಡಿಹಳೆಯದಾಖಲೆಗಳನ್ನು ಡಿಜಟಲೀಕರಣ ಮಾಡಲಾಗುತ್ತಿದೆ.

ಈ ಕೇಂದ್ರದಲ್ಲಿ ಬಬಲೇಶ್ವರ ಮತ್ತು ತಿಕೋಟಾ ಎರಡೂ ತಾಲೂಕುಗಳ ಹಳೆಯ ಎಲ್ಲ ಭೂ ದಾಖಲೆಗಳ ಗಣಕೀಕರಣ ನಡೆಯಲಿದ್ದು,

ಇದರಿಂದ ದಾಖಲೆಗಳ ಸುರಕ್ಷತೆ ಮತ್ತು ಸುಲಭವಾಗಿ ಲಭ್ಯತೆ ಸಾಧ್ಯವಾಗಲಿದೆ.

# ನಮ್ಮೂರ ಜಾತ್ರೆ ಗೋ-ಮಾತೆ ಪೂಜೆಯೊಂದಿಗೆ ಆರಂಭ

**ವಿಜಯಪುರ :** ಶ್ರೀ ಸಿದ್ಧೇಶ್ವರ ಸಂಕ್ರಮಣದ ಜಾತ್ರಾ ಮಹೋತ್ಸವದ ಅಂಗವಾಗಿ ಶ್ರೀ ಸಿದ್ಧೇಶ್ವರ ದೇವಾಲಯದಲ್ಲಿ ನಮ್ಮೂರ ಜಾತ್ರೆಯ ಗೋ ಪೂಜೆಯೊಂದಿಗೆ ನಂದಿಕೊಲ ಪೂಜೆಗಳನ್ನು ಶ್ರೀ ಸಿದ್ಧೇಶ್ವರ ಸಂಸ್ಥೆಯ ಅಧ್ಯಕ್ಷ ವಿಜಯಪುರ ನಗರದ ಶಾಸಕ ಬಸನಗೌಡ ಪಾಟೀಲ(ಯತ್ನಾಳ) ನೇರೆವೇರಿಸಿದರು.

ನಂದಿಕೋಲಗಳನ್ನು ಹಿಡಿಯುವ ಪಟುಗಳು ನೀಲುವ ಅಂಗಿ, ಧೋತ್ರ, ಪಟ್ಟವಡಿ, ಹಾಕಿಕೊಂಡು ಭಕ್ತಿ ಶ್ರದ್ದೆಯಿಂದ ನಂದಿಕೋಲಗಳನ್ನು ಹಿಡಿದರು. ಅಟಲ್ ಬಿಹಾರಿ ವಾಜಪೇಯಿ ರಸ್ತೆಯಲ್ಲಿರುವ ಚತುರ್ಮುಖ ಗಣೇಶನಿಗೆ ವಿಶೇಷ ಪೂಜೆ ಮಾಡಲಾಯಿತು.

ಈ ಕಾರ್ಯಕ್ರಮದಲ್ಲಿ ಸಂಸ್ಥೆಯ ಉಪಾಧ್ಯಕ್ಷ ಸಂಗು ಸಜ್ಜನ, ಚೇರಮನ್ ಬಸಯ್ಯ ಹಿರೇಮಠ, ಕಾರ್ಯದರ್ಶಿ ಸದಾನಂದ ದೇಸಾಯಿ, ಜಂಟಿ ಕಾರ್ಯದರ್ಶಿ ಎಂ.ಎಂ.



ಸಜ್ಜನ, ಕಾರ್ಯದರ್ಶಿಗಳಾದ ಬಿ.ಎಸ್. ಸುಗೂರ, ಸದಾನಂದ ಎಚ್. ದೇಸಾಯಿ, ಶಿವಾನಂದ ನೀಲಾ, ಜಾತ್ರಾ ಸಮಿತಿಯ ಗುರು ಗಚ್ಚಿನಮಠ, ಶಿವರುದ್ರ ಬಾಗಲಕೋಟ, ರಾಹುಲ್ ಜಾಧವ, ಎಸ್.ಎಮ್. ಪಾಟೀಲ, ರಾಜಶೇಖರ ಮಗಿಮಠ, ಪ್ರೇಮಾನಂದ ಬಿರಾದಾರ, ಎಸ್.ಸಿ. ಉಪ್ಪಿನ, ಎಸ್.ಎಚ್. ನಾಡಗೌಡ, ಎಮ್.ಎಸ್. ಕರಡಿ, ಬಸವರಾಜ ಗಣಿ, ಸುಧೀರ ಚಿಂಚಲಿ, ಶಿವಾನಂದ ನೀಲಾ, ರಮೇಶ ಹಳ್ಳದ, ಸುಧೀರ ಚಿಂಚಲಿ, ವಿಜಯಕುಮಾರ ಡೋಣಿ, ಎನ್.ಎಮ್. ಗೋಲಾಯಿ, ಮಹಾದೇವ ಹತ್ತಿಕಾಳ, ಸಾಯಿಬಣ್ಣ ಭೊವಿ, ಶಶಿಕಾಂತ ಮುದಕಾಮಠ, ಬಾಗಪ್ಪ ಕನ್ನೊಳ್ಳಿ, ಶ್ರೀಮಂತ ಜಂಬಗಿ, ಪ್ರವೀಣ ಬಿಜ್ಜರಗಿ, ಈರಣ್ಣ ಪಾಟೀಲ, ಶಿವಾನಂದ ಚಿಮ್ಮಲಗಿ, ಚಂದ್ರು ಚೌಧರಿ, ಸುರೇಶ ಇಟಗಿ, ಮಲ್ಲಿಕಾರ್ಜುನ ಹಿಟ್ನಳ್ಳಿ, ಬಸವರಾಜ ಬೆಲ್ಲದ, ಬಸವರಾಜ ಕಂದಗಲ, ಬಸವರಾಜ ಬಿರಾದಾರ, ಮಲಕಪ್ಪ ಗಾಣಿಗೇರ, ಲಕ್ಷ್ಮಣ ಜಾಧವ ಮುಂತಾದ ಪ್ರಮುಖರು ಹಾಗೂ ಭಕ್ತಾದಿಗಳು ಹಾಜರಿದ್ದರು.

ಗೋ ಮಾತೆ ಪೂಜೆಯನ್ನು ಹಿರಿಯರಾದ ಮುರಗಯ್ಯಾ ಗಚ್ಚಿನಮಠ, ನಂದಿಕೋಲ ಪೂಜೆಯನ್ನು ಅರ್ಚಕರಾದ ಸಿದ್ದಯ್ಯ ಹಿರೇಮಠ, ಶಿವಾನಂದಯ್ಯ ಹಿರೇಮಠ, ನೀಲಕಂಠಯ್ಯಾ ಪೂಜಾರಿ ನೇರೆವೇರಿಸಿದರು.

## ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಅಶೋಕ ದಳವಾಯಿ ಅವರೊಂದಿಗೆ ಚರ್ಚೆ, ರೈತರ ಸಮಸ್ಯೆಗಳ ಪರಿಹಾರಕ್ಕೆ ಒತ್ತಾಯ



**ವಿಜಯಪುರ :** ನಗರದ ಮಹಾತ್ಮ ಗಾಂಧಿ ಭವನದಲ್ಲಿ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಅಶೋಕ ದಳವಾಯಿ ಅವರೊಂದಿಗೆ ಚರ್ಚಾ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಆರಂಭದಲ್ಲಿ ಮಹಾತ್ಮ ಗಾಂಧಿಜಿಯವರ ಮೂರ್ತಿಗೆ ಖಾದಿ ಹಾರ ಅರ್ಪಣೆ ಮಾಡಿ ನಂತರ ಕೃಷಿ ಬೆಲೆ ಆಯೋಗದ ಅಧ್ಯಕ್ಷ ಡಾ. ಅಶೋಕ ದಳವಾಯಿ ಅವರಿಗೆ ಸನ್ಮಾನಿಸಲಾಯಿತು.

ಬಳಿಕ ಸಭಾಂಗಣದಲ್ಲಿ ಮಹಾತ್ಮ ಗಾಂಧಿಜಿಯವರ ಭಜನೆ ಗೀತೆ ಪ್ರಸಾರ ಮಾಡಿ ಕೆಲ ಹೊತ್ತು ಧ್ಯಾನ ಮಾಡಲಾಯಿತು.

ನಂತರ ಕಾರ್ಯಕ್ರಮದ ಆರಂಭದಲ್ಲಿ ಕರ್ನಾಟಕ ರಾಜ್ಯ ಜಲ ಬಿರಾದರಿ ಸಂಸ್ಥೆ ವತಿಯಿಂದ ಜಿಲ್ಲೆಯ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರಕ್ಕಾಗಿ ಹಾಗೂ ಡೋಣಿ ನದಿ ಪುನರುಜ್ಜೀವನಕ್ಕಾಗಿ ಸೂಕ್ತ ಕ್ರಮಕೈಗೊಳ್ಳುವಂತೆ ಕೇಂದ್ರ ಮತ್ತು ರಾಜ್ಯ ಸರಕಾರಕ್ಕೆ ಮನವರಿಕೆ ಮಾಡುವಂತೆ ಕೋರಿ ಮನವಿ ಸಲ್ಲಿಸಲಾಯಿತು.

ಅವಿಭಜಿತ ವಿಜಯಪುರ ಜಿಲ್ಲೆಯು ಪಂಚನದಿಗಳ ಜಿಲ್ಲೆಯೆಂದು ಕರ್ನಾಟಕದಲ್ಲಿ ಹೆಸರುವಾಸಿಯಾಗಿದೆ. ಆದರೂ ವಿಜಯಪುರ ಜಿಲ್ಲೆಗೆ ಹಲವಾರು ವರ್ಷಗಳಿಂದ ಜಿಲ್ಲೆಗೆ ಬರಗಾಲ ಜಿಲ್ಲೆ ಎಂದು ಕೆಟ್ಟ ಹೆಸರು ಬಂದಿದೆ. ಮೂರು ವರ್ಷ ಅತಿವೃಷ್ಟಿ ಹಾಗೂ ಒಂದು ವರ್ಷ ಅನಾವೃಷ್ಟಿ ಅಗುತ್ತಿದೆ. ಇದನ್ನು ತಪ್ಪಿಸಲು ಪರಿಸರ ಸ್ನೇಹಿ ಕೆಲಸ ಮತ್ತು ಕಾಮಗಾರಿಗಳು ಮಾಡಲು ವಿಶೇಷ ಕಾಳಜಿ ವಹಿಸಬೇಕಾಗಿದೆ. ನೈಸರ್ಗಿಕ ನೀರಿನ ಮೂಲಗಳು ಕಾಣದಂತಾಗಿವೆ. ಜಲಾನಯನ ಪ್ರದೇಶಗಳು ಅಭಿವೃದ್ಧಿಗೊಳಿಸಬೇಕಾಗಿದೆ. ಹಳ್ಳ ಕೊಳ್ಳಗಳು, ಕೆರೆಗಳು, ಬಾವಿಗಳು ಜೀವಂತಗೊಳಿಸಬೇಕಾಗಿದೆ. ಆಗ ಮಾತ್ರ ನದಿಗಳು ಸರ್ವಋತು ಜೀವಂತವಾಗಿರುತ್ತವೆ. ಆಗ ಎಲ್ಲ ರೈತರ ಸಾರ್ವಜನಿಕರ ಬಾಳು ಹಸನಾಗುತ್ತದೆ. ಆಗ ಬರಗಾಲ ಜಿಲ್ಲೆ ಎಂಬ ಹಣೆ ಪಟ್ಟಿ ತಪ್ಪಿಸಬಹುದು ಎಂದು ಮನವಿಯಲ್ಲಿ ತಿಳಿಸಲಾಗಿದೆ.

ವಿಜಯಪುರ ಜಿಲ್ಲೆಯ ತಿಕೋಟಾ, ಬಬಲೇಶ್ವರ, ವಿಜಯಪುರ, ಬಸವನ ಬಾಗೇವಾಡಿ, ದೇವರಹಿಪ್ಪರಗಿ, ಸಿಂದಗಿ, ಮುದ್ದೇಬಿಹಾಳ ಮತ್ತು ತಾಳಿಕೋಟೆ 8 ತಾಲ್ಲೂಕು ಸೇರಿ ಒಟ್ಟು ಡೋಣಿ ನದಿಯ 176 ಕಿ.ಮಿ ದೂರ ಕ್ರಮಿಸುತ್ತ ಹರಿದಿದೆ. ಇಷ್ಟೆಲ್ಲಾ ಇದ್ದರೂ ವಿಜಯಪುರ ಜಿಲ್ಲೆಯ ಡೋಣಿ ನದಿ ದಡಲ್ಲಿರುವ ಜನರಿಗೆ ಜಾನುವಾರುಗಳಿಗೆ ನೀರಿನ ಅಭಾವ ನೀಗಿಸಲು ಸಾಧ್ಯವಾಗುತ್ತಿಲ್ಲ. ಮಳೆ ಬಂದರೆ ನದಿಯ ರೌದ್ರಾವತಾರ ನದಿ ದಡದ ಸಾರ್ವಜನಿಕರಿಗೆ ಆತಂಕವನ್ನುಂಟು ಮಾಡುತ್ತದೆ. ನದಿಯ ಅಲ್ಲಲ್ಲಿ ಅವೈಜ್ಞಾನಿಕವಾಗಿ ಹತ್ತಾರು ಸೇತುವೆಗಳು ನಿರ್ಮಾಣವಾಗಿವೆ. ಜೊತೆ ನದಿಯ ತುಂಬೆಲ್ಲಾ ಮುಳ್ಳುಕಂಟಿಗಳು ಬೆಳೆದು ಹರಿಯುವ ನೀರಿಗೆ ಅಡ್ಡಲಾಗಿ ನಿಂತಿರುವುದರಿಂದ ನದಿಯ ತನ್ನ ಮೂಲ ದಿಕ್ಕನ್ನು ಬದಲಿಸಿದೆ ಎಂದು ಮನವಿಯಲ್ಲಿ ವಿವರಿಸಲಾಗಿದೆ.

ಜಿಲ್ಲಾಡಳಿತ ಹಾಗೂ ಜಿಲ್ಲಾ ಪಂಚಾಯತಿ ಈ ಬಗ್ಗೆ ಪ್ರಾಯೋಗಿಕವಾಗಿ ಹರನಾಳ, ಸಾರವಾಡ ಹಾಗೂ ಹೊನಗನಹಳ್ಳಿ ಈ ಮೂರು ಗ್ರಾಮಗಳ ಸೇತುವೆಗಳ ಅಕ್ಕಪಕ್ಕ ಹೂಳು ತೆಗೆಯಲು ಸೇತುವೆಗಳ ನವೀಕರಣ ಮಾಡಿ ಪ್ರವಾಹ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುತ್ತಿವೆ. ಇದಕ್ಕೆ ತಾವು ಜಿಲ್ಲಾಡಳಿತಕ್ಕೆ ಸೂಕ್ತ ಸಲಹೆ ಮಾರ್ಗದರ್ಶನ ನೀಡಬೇಕೆಂದು ಆಗ್ರಹಿಸಲಾಯಿತು.

ಅದೇ ರೀತಿ ಇದು ದೊಡ್ಡ ಯೋಜನೆಯಾಗಿರುವುದರಿಂದ ಹೆಚ್ಚಿನ ಅನುದಾನದ ಅವಶ್ಯಕತೆಯಿದೆ. ಅದಕ್ಕಾಗಿ ರಾಜ್ಯ ಹಾಗೂ ಕೇಂದ್ರ ಸರಕಾರಗಳು ಇದನ್ನು ಗಂಭೀರವಾಗಿ ಪರಿಗಣಿಸಿ ಶಾಶ್ವತ ಪರಿಹಾರ ಮಾಡಿಸಿಕೊಡಬೇಕೆಂದು ಹಾಗೂ ನ್ಯಾಯ ಸಮ್ಮತವಾಗಿ ಈ ಸಮಸ್ಯೆ ಪರಿಹರಿಸಲು ತಜ್ಞರ, ಹೋರಾಟಗಾರರ ಮತ್ತು ಅಧಿಕಾರಗಳನ್ನೊಳಗೊಂಡ ಒಂದು ಸಮಿತಿ ರಚಿಸಿ. ಈ ಮೂಲಕ ಜಿಲ್ಲೆಯ ಸಮಸ್ತ ರೈತರ ಪರವಾಗಿ ಜಲ ಬಿರಾದರಿ ಸಂಸ್ಥೆ ಮನವಿ ಮಾಡಿಕೊಂಡಿದೆ ಎಂದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಜಲ ಬಿರಾದರಿ ಸಂಸ್ಥೆಯ ಅಧ್ಯಕ್ಷ ಪೀಟರ್ ಅಲೆಕ್ಸಾಂಡರ್ ಹಾಗೂ ಜಂಟಿ ಕೃಷಿ ನಿರ್ದೇಶಕಿ ಡಿ. ರೂಪಾ ಹಾಗೂ ಗಾಂಧಿಭವನದ ಉಸ್ತುವಾರಿ ಸಮಿತಿಯ ಸದಸ್ಯರಾದ ಬಾಪುಗೌಡ ಪಾಟೀಲ, ಪೈರೋಜ್, ನೀಲೇಶ ಕುಲಕರ್ಣಿ, ಸಮಾಜ ಚಿಂತಕರಾದ ಅಪ್ಪಾಸಾಬ ಯರನಾಳ, ತಿಕೋಟಾ ತಾಲೂಕಾ ಅಧ್ಯಕ್ಷೆ ಪ್ರಭಾವತಿ ನಾಟಿಕಾರ ಹಾಗೂ ವಕೀಲರಾದ ಶ್ರೀಶೈಲ ಸಜ್ಜನ, ಬಾಬು ಸಜ್ಜನ, ಮಹಾಂತೇಶ ಕೆರುಟಗಿ, ಮಹಾದೇವ ಲಿಗಾಡೆ, ಚಂದ್ರಶೇಖರ ವಾಲಿ ಹಾಗೂ ಇತರ ಅಧಿಕಾರಿಗಳು ಮತ್ತು ರೈತರು ಭಾಗವಹಿಸಿದ್ದರು.

## ಜಿಲ್ಲಾ ಆಡಳಿತ ವತಿಯಿಂದ ಸಿದ್ದರಾಮರ ಜಯಂತಿ ಆಚರಣೆ

**ವಿಜಯಪುರ:** 12ನೇಶತಮಾನದಲ್ಲಿಅನುಭವ ಮಂಟಪದ ಶಿವಶರಣ ಬಸವಣ್ಣನವರು, ಸಿದ್ದರಾಮರು ಸಮಾತಾವಾದದ ಮೇಲೆ ಸಮಾಜವನ್ನು ಕಟ್ಟಿದವರಾಗಿದ್ದರು ಎಂದು ಅಪರ ಜಿಲ್ಲಾಧಿಕಾರಿ ಸೋಮಲಿಂಗ ಗೆಣ್ಣೂರ ಹೇಳಿದರು.

ಜಿಲ್ಲಾಡಳಿತ ವತಿಯಿಂದ ಕಂದಗಲ್ ಹನಮಂತರಾಯ ರಂಗ ಮಂದಿರದಲ್ಲಿ ಆಯೋಜಿಸಿದ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ನಮ್ಮಲ್ಲಿರುವ ಮೂಢನಂಬಿಕೆಗಳನ್ನು ಕಿತ್ತೊಗೆದು ಸಮತಾವಾದ ಸಮಾಜವನ್ನು ನಿರ್ಮಿಸಿದ ಶರಣರು ನಮಗೆ ದಾರಿದೀಪವಾಗಿದ್ದಾರೆ. ಏಕದೇವಾಪಾಸನೆಯನ್ನು ಪ್ರತಿಪಾದಿಸಿದ ಅವರು ಶರಣರ ಜೀವನ ಹಾಗೂ ವಚನಗಳು ನಮಗೆ ಸಮಾತಾ ಸಮಾಜವಾದವನ್ನು ಕಟ್ಟಿಕೊಟ್ಟಿವೆ. ಸಮಾನತೆ ಸಮಾಜವನ್ನು ನಿರ್ಮಾಣ ಮಾಡಲಿಕ್ಕೆ 12ನೇ ಶತಮಾನ ಭದ್ರ ಬುನಾದಿ ಹಾಕಿಕೊಟ್ಟಿದೆ. ಅದರ ಮೇಲೆ ಆಧರಿಸಿ ಬಸವಣ್ಣನವರು, ಬುದ್ಧ, ಅಂಬೇಡ್ಕರ, ಪೆರಿಯಾರ ಹಾಗೂ ಜ್ಯೋತಿಬಾ ಫುಲೆ ಅವರು ಸಮಾನತೆ ಸಮಾಜವನ್ನು ಕಟ್ಟಿದ್ದಾರೆ. ಆದುದರಿಂದ ವಚನಗಳು ಶಾಸ್ತ್ರಗಳಾಗಿವೆ. ನಾವೆಲ್ಲರೂ ಒಂದೇ ಎಂಬ ಮನೋಭಾವ ಬೆಳೆಸಿದಂತಹ



12ನೇ ಶತಮಾನದ ಬಸವಣ್ಣ, ಸಿದ್ದರಾಮರು ಹಾಗೂ ಸಮಕಾಲಿನ ಶಿವಶರಣರು. ಇಂದು ನವೆಲ್ಲರೂ ಭಾತೃತ್ವ, ಸಹೋದರತ್ವದ ಭಾವನೆಗಳನ್ನು ಕಳೆದುಕೊಂಡಿದ್ದೇವೆ. ಸಹೋದರತ್ವ, ಬಾತೃತ್ವ ಹಾಗೂ ಸಮಾನತೆ ಕುರಿತು ಬರೆದ ನಮ್ಮ ಸಂವಿಧಾನ ಅಡಿಪಾಯವಾಗಿವೆ. ಡಾ. ಅಂಬೇಡ್ಕರ ಅವರು ಕೊಟ್ಟ ಕೊಡುಗಗಳಾಗಿವೆ. ಈ ಶಬ್ಧಗಳ ಆದಾರದ ಮೇಲೆ ಸಮಾಜ, ದೇಶ, ರಾಷ್ಟ್ರಗಳು ನಿಂತಿವೆ. ಇಂದು ಸಮಾಜವು ಕಾಯಕದ ಮೇಲೆ ನಿಂತಿದೆ. ನಾವು ಶ್ರಮ ಪಟ್ಟು ದುಡಿಯದೆ ಮತ್ತೊಬ್ಬರ ಅನ್ನವನ್ನು ಕಸಿದುಕೊಳ್ಳುತ್ತಿದ್ದೇವೆ. ಇದು ಕಳವಳಕಾರಿ ವಿಷಯವಾಗಿದೆ. ಶಿವಶರಣರ ಅನ್ನ ದಾಸೋಹಿಗಳಾಗಿದ್ದರು ಹಾಗೂ ಮಾರ್ಗದರ್ಶಕರಾಗಿದ್ದರು. ಅಂತಹ ಮಹಾನ ಶಿವಶರಣರು, ಮಹಾಪುರುಷರ ಆದರ್ಶ, ತತ್ವಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕೆಂದು ಅವರು ಹೇಳಿದರು.

ಸಿಕ್ಯಾಬ್ ಕಾಲೇಜಿನ ಪ್ರಾಧ್ಯಾಪಕ ವಿವೇಕ ಕುಂಟೋಜಿ ಉಪನ್ಯಾಸಕರಾಗಿ ಮಾತನಾಡಿ, ಶಿವಯೋಗಿ ಸಿದ್ದರಾಮರು ಕೃಷಿಕ, ವಿಜ್ಞಾನಿ ಅಲ್ಲದೆ ಇಂಜಿನಿಯರಾಗಿ ಜನಮನ ಗಳಿಸಿದ್ದವರಾಗಿದ್ದರು. ಅಂದಿನ ಕಾಲಗಳಲ್ಲಿ ವಿಜಯಪುರ ಹಾಗೂ ಸೊಲಾಪುರ ಬಾಗಗಳಲ್ಲಿ ಹೆಚ್ಚಾಗಿ ಬರದಿಂದ ಕೂಡಿದನ್ನು ಮನಗಂಡು ಇಂದಿನ ಸೊಲಾಪುರದ ಹಲವೆಡೆ ಕೆರೆ ಕಟ್ಟೆಗಳನ್ನು ಕಟ್ಟಿಸಿದನ್ನು ಇಂದಿಗೂ ನಾವು ಕಾಣಬಹುದಾಗಿದೆ 12ನೇ ಶತಮಾನದಲ್ಲಿ ಅನುಭವ ಮಂಟಪ ಕಟ್ಟಿಕೊಂಡು ಮೂಢನಂಬಿಕೆ, ಕಂದಾಚಾರ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿದ ಮಹಾನ್ ಶರಣರಾಗಿದ್ದರು. ಅಂತರ್ಜಾತಿ ವಿವಾಹಕ್ಕೆ ಹೆಚ್ಚು ಪ್ರೋತ್ಸಾಹಿಸುತ್ತಿದ್ದರು. ಮನುಕುಲ ಒಂದೆ ಎಂದು ಪ್ರತಿಪಾದಿಸಿದ ಅವರು ಸಮಾನತೆ ಹಾಗೂ ಜಾತ್ಯಾತೀತದಿಂದ ಕೂಡಿದ ಸಮಾಜ ನಿರ್ಮಾಣಕ್ಕೆ ಶ್ರಮ ಪಟ್ಟಿದ್ದರು. ಅವರ ಚಿಂತನೆಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಅವರು ಹೇಳಿದರು. ಸಮಾಜದ ಮುಖಂಡರಾದ ನಾಗಪ್ಪ ಗುಜರಕರ ಮಾತನಾಡಿದರು.

**ಮೆರವಣಿಗೆಗೆ ಚಾಲನೆ :**

ಕಾರ್ಯಕ್ರಮ ಬೆಳಿಗ್ಗೆ ನಗರದ ಶ್ರೀ ಸಿದ್ದೇಶ್ವರ ದೇವಸ್ಥಾನ ಆವರಣದಲ್ಲಿ ಜಿಲ್ಲಾಧಿಕಾರಿಗಳಾದ ಟಿ.ಭೂಬಾಲನ್ ಶಿವಯೋಗಿ ಸಿದ್ದರಾಮ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು.

ಕಾರ್ಯಕ್ರಮದಲ್ಲಿ ಮಹಾನಗರ ಪಾಲಿಕೆ ಸದಸ್ಯರುಗಳಾದ ವಿಠ್ಠಲ ಹೊಸಪೇಟೆ, ರಾಹುಲ ಜಾಧವ, ಸಮಾಜ ಮುಖಂಡರುಗಳಾದ ವಿ.ಸಿ ನಾಗಠಾಣ, ಮ.ಗು. ಯಾದವಾಡ, ರಾಮು ಹೊಸಪೇಟೆ, ಭೀಮರಾಯ ಜಿಗಜಿಣಗಿ, ದೇವೇಂದ್ರ ಮೀರೆಕರ, ಸೋಮನಗೌಡ ಕಲ್ಲೂರ, ಕೆ.ವಾಯ್. ಆಲಕುಂಟೆ ಹಾಗೂ ಇತರರು ಉಪಸ್ಥಿತರಿದ್ದರು.

## ಗೋಮಾತೆ ಕೆಚ್ಚಲು ಕೊಯ್ದ ಆರೋಪಿಗಳಿಗೆ ಕಠಿಣ ಶಿಕ್ಷೆಗೆ ಗುರಿಪಡಿಸಿ: ಅಂಗಡಿ

**ವಿಜಯಪುರ :** ಚಾಮರಾಜಪೇಟೆಯಲ್ಲಿ ನಡೆದ ಗೋಮಾತೆ ಕೆಚ್ಚಲು ಕೊಯ್ದ ಘೋರ ಕೃತ್ಯದ ಘಟನೆ ಖಂಡನೀಯವಾಗಿದ್ದು, ಆರೋಪಿಗಳಿಗೆ ಕಠಿಣ ಶಿಕ್ಷೆ ವಿಧಿಸಬೇಕು ಎಂದು ಬಿಜೆಪಿ ರೈತ ಮೋರ್ಚಾ ಜಿಲ್ಲಾಧ್ಯಕ್ಷ ಗುರುಲಿಂಗಪ್ಪ ಅಂಗಡಿ ಒತ್ತಾಯಿಸಿದರು.

ಮಂಗಳವಾರ ನಗರದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿ ಆದಿಯಾಗಿ ಹಲವು ಮಂತ್ರಿಗಳಿಗೆ ಗೋಮಾತೆಯ ಬಗ್ಗೆ ಕರುಣೆ, ಕನಿಕರ ಇಲ್ಲದಂತಾಗಿದೆ. ಮುಖ್ಯಮಂತ್ರಿಯವರೇ ಗೋಮಾಂಸ ತಿನ್ನುವುದಾಗಿ ಹೇಳುವ ಮನಸ್ಥಿತಿ ಇರುವುದರಿಂದ, ದುಷ್ಟ ಶಕ್ತಿಗಳು ರಾಜ್ಯದಲ್ಲಿ ಗೋಮಾತೆಯ ಕೆಚ್ಚಲ ಕೊಯ್ದು ಹೀನಾಯ ಕೃತ್ಯ ಎಸಗಿದ್ದಾರೆ. ಇದಕ್ಕೆ ಮುಖ್ಯ ಕಾರಣ ಕಾಂಗ್ರೆಸ್ ಸರ್ಕಾರ ಮತ್ತು ಮಂತ್ರಿ ಮಂಡಲ ಎಂದು ಆಕ್ರೋಶ ವ್ಯಕ್ತಪಡಿಸಿದರು.



ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಒಂದಿಲ್ಲ ಒಂದು ಜನ ವಿರೋಧಿ ಕೆಲಸ ಮಾಡುತ್ತಿದೆ. ರೈತ ಉಪಯೋಗಿ ಹಲವಾರು ಕಾರ್ಯಕ್ರಮಗಳನ್ನು ನಿಲ್ಲಿಸಿ ರೈತರಿಗೆ ಅನ್ಯಾಯ ಮಾಡಿದೆ ಎಂದು ದೂರಿದರು.

ಮುಖ್ಯಮಂತ್ರಿ ಗಾದಿಗಾಗಿ ಒಳಗೊಳಗೆ ಮುಸಕಿನ ಗುದ್ದಾಟದಿಂದ, ಕಾರ್ಮಿಕ ವರ್ಗಕ್ಕೆ ಕೆಲಸ ಇಲ್ಲದೆ ಕಾರ್ಮಿಕ ವರ್ಗ ಒದ್ದಾಡುವಂತಾಗಿದೆ. ರಾಜ್ಯದಲ್ಲಿ ಗುತ್ತಿಗೆದಾರರು ಬೇರೆ ಉದ್ಯೋಗ ಹುಡುಕುತ್ತಿದ್ದಾರೆ. ಕಾಂಗ್ರೆಸ್ ಕೆಟ್ಟ ನೀತಿಗಳಿಂದ ಮುಂದಿನ ದಿನ ಸರ್ಕಾರದ ಕೆಲಸಗಳಿಗಾಗಿ ಆಂಧ್ರ ಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಿಂದ ಗುತ್ತಿಗೆದಾರರನ್ನು ಕರೆಸಿ ಕೆಲಸ ಮಾಡುವ ಪ್ರಸಂಗ ಬರಬಹುದು. ಏಕೆಂದರೆ ಗುತ್ತಿಗೆದಾರರಿಗೆ ಎರಡು ವರ್ಷದಿಂದ ಹಳೆಯ ಬಾಕಿ ಹಣವನ್ನು ಕೊಡದೆ ಗುತ್ತಿಗೆದಾರರು ಬೀದಿಗೆ ಬಂದು ಹೋರಾಟಕ್ಕೆ ಇಳಿಯುವಂತಾಗಿದೆ. ರೈತರ ಆತ್ಮಹತ್ಯೆ ಜೊತೆಗೆ ಗುತ್ತಿಗೆದಾರರ ಆತ್ಮಹತ್ಯೆಯು ರಾಜ್ಯದಲ್ಲಿ ಕಾಣುತ್ತಿರುವುದು ಸರ್ಕಾರದ ದುರ್ವರ್ತನೆಗೆ ಹಿಡಿದ ಕನ್ನಡಿಯಾಗಿದೆ ಎಂದು ನುಡಿದರು.

ಗೋವನ್ನು ಹಿಂದೂಗಳು ಪೂಜ್ಯ ಭಾವನೆಯಿಂದ ನೋಡಲಾಗುತ್ತಿದ್ದು, ಹಿಂದೂಗಳ ಭಾವನೆಗೆ ಧಕ್ಕೆ ತರುವ ಕಾರ್ಯ ನಿರಂತರವಾಗಿ ನಡೆಯುತ್ತಿದೆ. ಹಬ್ಬ- ಹರಿದಿನ, ಶುಭ ಸಂದರ್ಭದಲ್ಲಿ ಹಸುವಿನ ಪೂಜೆ ಮಾಡುತ್ತೇವೆ. ಹಸುವಿನಲ್ಲಿ 33 ಕೋಟಿ ದೇವಾನುದೇವತೆಗಳು ವಾಸಿಸುತ್ತಾರೆ ಎಂದು ನಂಬಿದ್ದೇವೆ. ವಾಸ್ತುದೋಷ ನಿವಾರಕ, ನಿವಾರಣೆಗಾಗಿ ಗೋಮಾತೆಯನ್ನು ಗೃಹಪ್ರವೇಶಕ್ಕೆ ಸ್ವಾಗತಿಸುತ್ತೇವೆ. ಹೀಗಾಗಿ ಕಾಂಗ್ರೆಸ್ ಸರ್ಕಾರಕ್ಕೆ ಕೆಲ ಪ್ರಶ್ನೆಗಳನ್ನು ಕೇಳ ಬಯಸುವೆ ಎಂದು, ಇಟ್ಟರೆ ಸಗಣಿಯಾದೆ, ತಟ್ಟಿದರೆ ಕುರುಳಾದೆ, ಸುಟ್ಟರೆ ನೊಸಲಿಗೆ ವಿಭೂತಿಯಾದೆ, ನೀನಾರಿಗಾದೆಯೋ ಎಲೇ ಕಾಂಗ್ರೆಸ್ಸಿನ ದುಷ್ಟ ಮನುಷ್ಯತ್ವವುಳ್ಳ ಮಾನವನೇ?, ಹಾಲಾದೆ ಕರೆದರೆ, ಮೊಸರಾದೆ ಹೆಪ್ಪಿಟ್ಟರೆ, ಮೊಸರು ಕಡೆದರೆ ಬೆಣ್ಣೆಯು ನಾನಾದೆ, ಮೇಲಾಗಿ ಬೆಣ್ಣೆಯನ್ನು ಕಾಸಿದರೆ ತುಪ್ಪಾದೆ, ನೀನಾರಿಗಾಗಿಯೋ ಕಾಂಗ್ರೆಸ್ಸಿನ ದುಷ್ಟ ಮನುಷ್ಯತ್ವವುಳ್ಳ ಮಾನವನೇ ?, ನಿನ್ನ ತಾಯಿ ಜನ್ಮ ಕೊಟ್ಟಳು, ನಾನು ನಿನ್ನನ್ನು ಸಲುಹಿದೆ ನನ್ನ ಕೆಚ್ಚಲು ಕೊಯ್ದೆ ನೀನಾರಿಗಾಗಿಯೋ ಕಾಂಗ್ರೆಸ್ಸಿನ ದುಷ್ಟ ಮನುಷ್ಯತ್ವವುಳ್ಳ ಮಾನವನೇ ?, ಕಲ್ಲು ಭೂಮಿಯನ್ನು ಅಗೆದು ಮಣ್ಣು ಮಾಡಿ ಬಿತ್ತನೆಗೆ ಭೂಮಿ ಹದ ಮಾಡುವ ಬಸವಣ್ಣನನ್ನು ಕೊಟ್ಟೆ ನೀನೇನು ನನಗೆ ಕೊಟ್ಟೆ ನೀನಾರಿಗಾಗಿಯೋ ಕಾಂಗ್ರೆಸ್ಸಿನ ದುಷ್ಟ ಮನುಷ್ಯತ್ವವುಳ್ಳ ಮಾನವನೇ ? ಎಂದು ವ್ಯಂಗ್ಯವಾಗಿ ಆಕ್ರೋಶ ವ್ಯಕ್ತಪಡಿಸಿದರು.

ಬಿಜೆಪಿ ಮುಖಂಡರಾದ ವಿಜಯ ಜೋಶಿ ಸೇರಿದಂತೆ ಇತರರು ಪತ್ರಿಕಾಗೋಷ್ಠಿಯಲ್ಲಿ ಇದ್ದರು.

## 51 ನೇ ವರ್ಷದ ವೇದಾಂತ ಪರಿಷತ್

## ಮಹಾಲಿಂಗಪುರ ವೇದಾಂತದ ತವರು ಮನೆ: ಸಹಜಾನಂದ ಸ್ವಾಮಿಜಿ

**ಮಹಾಲಿಂಗಪುರ :** ಪ್ರಕರಣ ಪ್ರವೀಣ ಬಸವಾನಂದ ಮಹಾಸ್ವಾಮಿಗಳು ಮಹಾಲಿಂಗಪುರಕ್ಕೆ ಬಂದು ನೆಲೆಸಿದ ಪರಿಣಾಮ ಮಹಾಲಿಂಗಪುರವು ವೇದಾಂತದ ತವರು ಮನೆಯಾಗಿದೆ ಎಂದು ಸಿದ್ದಾರೂಢ ಬ್ರಹ್ಮ ವಿದ್ಯಾಶ್ರಮದ ಸಹಜಾನಂದ ಸ್ವಾಮಿಜಿ ಹೇಳಿದರು.

ಬುಧವಾರ ಮುಂಜಾನೆ ಪಟ್ಟಣದ ಬನಶಂಕರಿ ಸಾಂಸ್ಕೃತಿಕ ಭವನದಲ್ಲಿ ನಡೆದ ಪ್ರಕರಣ ಪ್ರವೀಣ ಬಸವಾನಂದ ಮಹಾಸ್ವಾಮಿಗಳ 51 ನೇ ವೇದಾಂತ ಪರಿಷತ್ ಕಾರ್ಯಕ್ರಮದ ಎರಡನೇ ದಿನದ ಕಾರ್ಯಕ್ರಮದ ದಿವ್ಯ ಸಾನಿಧ್ಯ ವಹಿಸಿ ಕಠೋಪನಿಷತ್ತಿನ ಉತ್ತಿಷ್ಠತ: ಜಾಗೃತ: ಪ್ರಾಪ್ಯುವರಾನ್ ನಿಭೋಧತ: ವಿಷಯದ ಕುರಿತು ಮಾತನಾಡಿದ ಅವರು ಬಸವಾನಂದ ಸ್ವಾಮಿಗಳು ಮಹಾಲಿಂಗಪುರದಲ್ಲಿ ಅಧ್ಯಾತ್ಮ ಸಂಸ್ಕೃತಿಯನ್ನು ಹುಟ್ಟು ಹಾಕಿದ ಕಾರಣ ಈ ಭಾಗದಲ್ಲಿ ಹೆಚ್ಚಾಗಿ ಅಧ್ಯಾತ್ಮ ಮತ್ತು ವೇದಾಂತದ ಕಾರ್ಯಕ್ರಮಗಳು ನಡೆಯಲು ಸಾಧ್ಯವಾಗಿದೆ.

ಕಳೆದ ಐವತ್ತು ವರ್ಷಗಳಲ್ಲಿ ಬಸವಾನಂದರ ವೇದಾಂತ ಪರಿಷತ್ಗೆ ಕಾಶಿ ಪೂಜ್ಯರು, ಬೀದರ, ಇಂಚಲ, ವಿಜಯಪುರ, ಹುಬ್ಬಳ್ಳಿ ಶ್ರೀಗಳು




ಸೇರಿದಂತೆ ನಾಡಿನ ಎಲ್ಲಾ ಪೂಜ್ಯರು ನಮ್ಮ ಪಟ್ಟಣಕ್ಕೆ ಬರುವಂತಾಗಿದೆ. ಮೋಹದ ಬಲೆಯಲ್ಲಿ ಬಿದ್ದು ನಿದ್ರೆಯಲ್ಲಿರುವ ಮುಮುಕ್ಷಗಳನ್ನು ಮಹಾತ್ಮರು ಇಂತಹ ಪ್ರವಚನ ಕಾರ್ಯಕ್ರಮಗಳ ಮೂಲಕ ಎಚ್ಚರಿಸುತ್ತಲಿದ್ದಾರೆ. ಮುಮುಕ್ಷಗಳಿಗೆ ಮೋಕ್ಷ ಪ್ರಾಪ್ತಿಯಾಗಲು ಗುರುವಿನ ಪುತ್ರರಾಗಬೇಕು. ಸಮರ್ಥ ಸದ್ಗುರುವಿನಿಂದ ಮಾತ್ರ ಮೋಹವನ್ನು ಕಳೆಯಲು ಸಾಧ್ಯವಾಗುತ್ತದೆ. ಕೇವಲ ವಿಷಮ ಸಂಸಾರದ ಬಲೆಗೆ ಸಿಕ್ಕು ಒದ್ದಾಡುವದಕ್ಕಿಂತ ಸದ್ಗುರುವಿಗೆ ಶರಣಾಗಿ ಮೋಕ್ಷವನ್ನು ಪಡೆಯಲು ಪ್ರಯತ್ನಿಸಬೇಕು ಎಂದರು.

ಕಲಬುರ್ಗಿಯ ಪೂರ್ಣಪ್ರಜ್ಞ ಆಶ್ರಮದ ಮಾತೋಶ್ರೀ ಲಕ್ಷ್ಮೀತಾಯಿ ಮಾತನಾಡಿ, ಸದ್ಗುರುವಿನಿಂದ ಮಾತ್ರ ನಮ್ಮ ಭ್ರಮೆಯನ್ನು ಕಳೆಯಲು ಸಾಧ್ಯ. ಕಾರಣ ಮುಮುಕ್ಷುಗಳು ಸದಾ ಸತ್ಸಂಗ, ಜ್ಞಾನ, ಜಪ, ತಪಗಳ ಜೊತೆಗೆ ಸದ್ಗುರುಗಳ ಪಾದಕ್ಕೆ ಶರಣಾಗಿ ಜನನ-ಮರಣಗಳ ಚಕ್ರದಿಂದ ಬಿಡುಗಡೆಯಾಗಿ ಮಾನವ ಜನ್ಮವನ್ನು ಸಾರ್ಥಕ ಪಡಿಸಿಕೊಳ್ಳಬೇಕು ಎಂದರು.

**ಪ್ರವಚನಕ್ಕೆ ಚಾಲನೆ :**

ಮಂಗಳವಾರ ರಾತ್ರಿ 51 ನೇ ವೇದಾಂತ ಪರಿಷತ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಉಪಸ್ಥಿತ ಮಹಾತ್ಮರು ಮೃತ್ಯು ಮುಟ್ಟದ ಮುನ್ನ ಪೂಜಿಸು ನಮ್ಮ ಕೂಡಲಸಂಗಮದೇವನ ವಚನಾಧರಿಸಿ ಪ್ರವಚನ ನೀಡಿದರು. ಬಸವಾನಂದ ಜಿಟ್ಟಿ, ಶಿವನಗೌಡ ಪಾಟೀಲ ದಾಸೋಹ ಸೇವೆ ಸಲ್ಲಿಸಿದರು.

ಕಲಬುರ್ಗಿಯ ಮಾತೋಶ್ರೀ ವರದಾದೇವಿ, ಜಮಖಂಡಿ ರುದ್ರಾವಧೂತಮಠದ ಕೃಷ್ಣಾನಂದ ಅವಧೂತರು, ಹೊಸೂರಿನ ಪರಮಾನಂದ ಸ್ವಾಮಿಜಿ, ಸಿದ್ದಾರೂಢ ಆಶ್ರಮದ ಸಿದ್ಧಾನಂದ ಭಾರತಿ ಸ್ವಾಮಿಜಿ ಪ್ರವಚನ ನೀಡಿದರು.

ಮಲ್ಲೇಶಪ್ಪ ಕಟಗಿ, ಡಾ. ಬಿ. ಡಿ. ಸೋರಗಾಂವಿ, ಚನ್ನಪ್ಪ ಪಟ್ಟಣಶೆಟ್ಟಿ, ಎಂ. ಪಿ. ಅಂಗಡಿ, ಕೆ. ಸಿ. ಚಿಂಚಲಿ, ಲಕ್ಕಪ್ಪ ಚಮಕೇರಿ, ಎಸ್. ಕೆ. ಗಿಂಡೆ, ಮಲಕಾಜಪ್ಪ ಅಂಬಿ, ಮಹಾಲಿಂಗಪ್ಪ ಜಿಟ್ಟಿ, ಈಶ್ವರಪ್ಪ ವಂದಾಲ, ನಾರಾಯಣ ಕಿರಗಿ, ಬಸವರಾಜ ಪಾಶ್ಚಾಪೂರ, ಉದ್ದಪ್ಪ ನಿಲಾರಿ, ಹಣಮಂತ ಮೀರಾಪಟ್ಟಿ, ಮಲ್ಲಪ್ಪ ಯಾದವಾಡ ಸೇರಿದಂತೆ ಬಸವಾನಂದ ಶಾಲೆಯ ಶಿಕ್ಷಕರು, ವಿದ್ಯಾರ್ಥಿಗಳು ಇದ್ದರು.

ಸಿದ್ದಾರೂಢ ಮುಗಳಖೋಡ ಸ್ವಾಗತಿಸಿದರು. ಹುಮಾಯೂನ ಸುತಾರ ನಿರೂಪಿಸಿದರು. ಎಸ್. ಕೆ. ಗಿಂಡೆ ವಂದಿಸಿದರು.

## ಕುಡಚಿ-ಬಾಗಲಕೋಟೆ ರೈಲು ಮಾರ್ಗ ಶೀಘ್ರ ಮುಗಿಸಲು ಆಗ್ರಹ

**ಬಾಗಲಕೋಟೆ :** ಕೇಂದ್ರ ಸರ್ಕಾರದ ರೈಲು ಖಾತೆಯ ರಾಜ್ಯ ಸಚಿವರಾದ ವಿ. ಸೋಮಣ್ಣನವರು ಕುಡಚಿ ಬಾಗಲಕೋಟೆ ರೈಲು ಮಾರ್ಗದ ಕಾಮಗಾರಿಯ ಪರಿಶೀಲನೆಗೆ ಆಗಮಿಸಿದ್ದ ಸಂದರ್ಭದಲ್ಲಿ ಹೋರಾಟ ಸಮಿತಿ ಅಧ್ಯಕ್ಷ ಕುತುಬುದ್ದೀನ ಖಾಜಿ ಕುಡಚಿ ರೈಲ್ವೆ ಮಾರ್ಗ 2025 ರಲ್ಲಿಯೇ ಪೂರ್ಣಗೊಳಿಸಲು ಸಚಿವರನ್ನು ಒತ್ತಾಯಿಸಿದರು. ಈ ಸಂದರ್ಭದಲ್ಲಿ ವಿವಿಧ ಬೇಡಿಕೆಗಳ ಕುರಿತು ಮನವಿ ಪತ್ರ ಸಲ್ಲಿಸಿ ಮಾತನಾಡಿದ ಅವರು ಗದಗ-ಯಲವಗಿ ಹೊಸ ರೇಲ್ವೇ ಮಾರ್ಗ ನಿರ್ಮಿಸಿದರೆ ಬಾಗಲಕೋಟೆ, ವಿಜಯಪುರ, ಸೋಲಾಪೂರ ಪ್ರಯಾಣಿಕರಿಗೆ 90 ಕಿ.ಮೀ ಸಮೀಪವಾಗುವ ಜೊತೆಗೆ ಮೂರು ಗಂಟೆಗಳ ಸಮಯದ ಉಳಿತಾಯ ಆಗಲಿದೆ. ಆಲಮಟ್ಟಿ-ಯಾದಗಿರಿ ಹೊಸ ರೈಲ್ವೆ ಮಾರ್ಗ ನಿರ್ಮಾಣವಾದರೆ ಉತ್ತರ ಕರ್ನಾಟಕದಿಂದ ಹೈದ್ರಾಬಾದಕ್ಕೆ ಸಂಪರ್ಕ ಹೊಂದಲು ಅನುಕೂಲವಾಗುತ್ತದೆ. ರೇಲ್ವೆ ಸಂಖ್ಯೆ: 17307-308 ಬಸವ ಎಕ್ಸಪ್ರೆಸ್, ಲೋಕಾಪೂರವರೆಗೆ ವಿಸ್ತರಿಸಿ ಶೀಘ್ರ ರೇಲ್ವೆ



ಸೇವೆ ಪ್ರಾರಂಭಿಸಬೇಕು.

ಗದಗ-ಹುಟಗೇರಿ ಮಾರ್ಗ ಡಬ್ಲಿಂಗ್ ಕಾಮಗಾರಿ ಕೂಡಲೇ ಪೂರ್ಣಗೊಳಿಸಿ, ವಂದೇ ಭಾರತ ಬುಲೆಟ್ ರೈಲು ವಿಜಯಪುರ-ಬಾಗಲಕೋಟ ಮಾರ್ಗದಲ್ಲಿ ಓಡಾಡುವಂತೆ ಮಾಡಬೇಕು. ಈ ಮಾರ್ಗಕ್ಕೆ ಒಳಪಡುವ ರೈಲು ನಿಲ್ದಾಣಗಳನ್ನು ಅಭಿವೃದ್ಧಿ ಪಡಿಸಬೇಕು. ಬಾಗಲಕೋಟ ರೈಲು ನಿಲ್ದಾಣ ಅಮೃತ ಭಾರತ ಯೋಜನೆಯಡಿ ನಿರ್ಮಾಣಗೊಳ್ಳುತ್ತಿದ್ದು, ಯೋಜನೆಗೆ ಒಳಪಡುವ ಎಲ್ಲಾ ಸೌಲಭ್ಯಗಳನ್ನು ದೊರಕಿಸಿ ಕೊಡಬೇಕು. ನಿಲ್ದಾಣದ ಪ್ಲ್ಯಾಟ್ ಫಾರ್ಮಗಳ ಎತ್ತರ ಹೆಚ್ಚಿಸಿ ರೈಲುಗಳ ನಿರ್ವಹಣೆಗಾಗಿ ಫಿಟ್ಲೈನ್ ನಿರ್ಮಿಸಬೇಕು.

**ಹೊಸ ರೇಲ್ವೆಗಳ ಬೇಡಿಕೆ:** ಪಂಡರಪುರ-ಸೋಲಾಪೂರ ವಿಜಯಪುರ-ಬಾಗಲ ಕೋಟೆ ಗದಗ ಮಾರ್ಗವಾಗಿ ತಿರುಪತಿಗೆ ತಲುಪುವಂತೆ ಹೊಸ ರೈಲು ಪ್ರಾರಂಭಿಸಬೇಕು. ವಿಜಯಪುರದಿಂದ ಗುಂಟಕಲ್ ಪ್ಯಾಸೆಂಜರ ರೈಲು ಪ್ರಾರಂಭಿಸಬೇಕು. ರೈಲು ಸಂಖ್ಯೆ-20657 ಹುಬ್ಬಳ್ಳಿ-ಹಜರತ್ ನಿಜಾಮುದ್ದೀನ ಸಾಪ್ತಾಹಿಕವಿದ್ದು, ಅದು ದಿನನಿತ್ಯ ಸಂಚರಿಸುವಂತೆ ಮಾಡಬೇಕು.

1) ರೈಲುಸಂಖ್ಯೆ-16217 ಶಿರಡಿ ರೈಲು, 2) ರೈಲು ಸಂಖ್ಯೆ-16587 ಬಿಕಾನೇರ ರೈಲು ಈ ಎರಡು ರೈಲುಗಳನ್ನು ದಿನನಿತ್ಯ ಪ್ರಾರಂಭಿಸಬೇಕು.

ರೈಲು ಸಂಖ್ಯೆ-57134 ರಾಯಚೂರ-ವಿಜಯಪುರ, ಇದು ಗದಗವರೆಗೆ ವಿಸ್ತರಣೆಯಾಗಬೇಕು. ರೈಲು ಸಂಖ್ಯೆ-06545, ವಿಜಯಪುರ-ಯಶವಂತಪುರ ಬೆಂಗಳೂರು ನಗರಕ್ಕೆ ತಲುಪುವಂತೆ ಮಾಡಬೇಕು. ಹೈದ್ರಾಬಾದ್ ವಿಜಯಪುರ ಗದಗವರೆಗೆ ವಿಸ್ತರಣೆಯಾಗಬೇಕು ಎಂದು ಕುತುಬುದ್ದೀನ ಖಾಜಿ ಸಚಿವರನ್ನು ಒತ್ತಾಯಿಸಿದರು.

ಈ ಸಂದರ್ಭದಲ್ಲಿ ಸಂಸದರಾದ ಪಿ. ಸಿ. ಗದ್ದಿಗೌಡರ, ವಿಧಾನ ಪರಿಷತ್ ಸದಸ್ಯ ಹಣಮಂತ ನಿರಾಣಿ, ತೇರದಾಳ ಶಾಸಕ ಸಿದ್ದು ಸವದಿ, ಉಪಾಧ್ಯಕ್ಷರಾದ ಶ್ರೀನಿವಾಸ ಬಳ್ಳಾರಿ, ರೈತ ಮುಖಂಡರಾದ ಸುಭಾಸ್ ಶಿರಬೂರ, ಮಂಜುಳಾ ಭೂಸಾರಿ, ಡಾ॥ ಯಾದವಾಡ, ಡಿ. ಎಫ್. ಹಾಜಿ, ಗೈಬು ಜೈನುಖಾನ, ಮೈನುದ್ದೀನ ಖಾಜಿ, ದಾದಾಫೀರ ಕೆರೂರ ಹಾಗೂ ಇನ್ನೂ ಅನೇಕರು ಉಪಸ್ಥಿತರಿದ್ದರು.

## ಯಲ್ಲಟ್ಟಿ ಬಳಿ ಸಿಎನ್‌ಜಿ ಟ್ಯಾಂಕರ್ ಪಲ್ಟಿ



**ರಬಕವಿ-ಬನಹಟ್ಟಿ :** ತಾಲೂಕಿನ ಯಲ್ಲಟ್ಟಿ ಬಳಿ ಮಂಗಳವಾರ ರಾತ್ರಿ ರಸ್ತೆ ಬದಿಯ ಗಿಡ ತಗುಲಿ ಸಿಎನ್ಜಿ ಟ್ಯಾಂಕರ್ ಪಲ್ಟಿಯಾಗಿ ಆತಂಕ ಸೃಷ್ಠಿಯಾಗಿತ್ತು. ಆದರೆ ಯಾವುದೇ ಅನಾಹುತ ಜರುಗಿಲ್ಲ.

ರಾತ್ರಿಯಾದ ಕಾರಣ ಯಾವುದೇ ಕಾರ್ಯಾಚರಣೆ ಮಾಡದೇ ಬುಧವಾರ ಬೆಳಿಗ್ಗೆ ಸ್ಥಳೀಯ ಅಗ್ನಿಶಾಮಕ ದಳದ ತಂಡ ಅದನ್ನು ಕ್ರೇನ್ ಮೂಲಕ ಯಶಸ್ವಿಯಾಗಿ ಮೇಲಕ್ಕೆ ಎತ್ತಿ ನಿಲ್ಲಿಸುವಲ್ಲಿ ಯಶಸ್ವಿಯಾಗಿದ್ದು, ಸ್ಥಳದ ಸುತ್ತಮುತ್ತಲೂ ಯಾವುದೇ ವಾಹನ ಪ್ರವೇಶಕ್ಕೆ ಅವಕಾಶ ನೀಡದೇ ಇದ್ದುದರಿಂದ ಜಗದಾಳ ಮಾರ್ಗವಾಗಿ ಬಸ್ ಹಾಗೂ ಇತರೆ ವಾಹನಗಳು ಸಂಚರಿಸಿದವು.

ಸ್ಥಳದಲ್ಲಿ ಡಿ.ವಾಯ್.ಎಸ್.ಪಿ. ಶಾಂತವೀರ ಈ., ಸಿ.ಪಿ.ಐ. ಸಂಜೀವ ಬಳಗಾರ, ಪಿ.ಎಸ್.ಐ. ಶಾಂತಾ ಹಳ್ಳಿ ಸ್ಥಳದಲ್ಲಿ ಹಾಜರಿದ್ದು ಪರಿಸ್ಥಿತಿಯನ್ನು ಸಮರ್ಥವಾಗಿ ನಿಭಾಯಿಸಿದರು. ಟ್ಯಾಂಕರ ಮಹಾಲಿಂಗಪುರಕ್ಕೆ ಸಿಎನ್ಜಿ ಪೂರೈಸಲು ಹೋಗುತ್ತಿತ್ತೆಂದು ತಿಳಿದು ಬಂದಿದೆ.

## ಸರ್ಕಾರಿ ಶಾಲಾ ಮಕ್ಕಳೊಂದಿಗೆ ಜನ್ಮ ದಿನಾಚರಣೆ



**ಮಹಾಲಿಂಗಪುರ :** ಪುರಸಭೆ ಮಾಜಿ ಉಪಾಧ್ಯಕ್ಷ, ಸಮಾಜ ಸೇವಕರು, ಗುತ್ತಿಗೆದಾರ ಚನಬಸು ಹುರಕಡ್ಲಿ ಅವರು ಬಸವ ನಗರದ ಸರ್ಕಾರಿ ಪ್ರಾಥಮಿಕ ಶಾಲಾ ಮಕ್ಕಳಿಗೆ ಕಲಿಕಾ ಸಾಮಗ್ರಿಗಳು ಮತ್ತು ಸಿಹಿ ವಿತರಿಸುವ ಮೂಲಕ ತಮ್ಮ 53 ನೇ ಹುಟ್ಟುಹಬ್ಬ ಆಚರಿಸಿಕೊಂಡರು.

ಪತ್ರಕರ್ತ ಚಂದ್ರಶೇಖರ ಮೋರೆ, ಮುಖಂಡರಾದ ಹಣಮಂತ ಶಿರೋಳ, ಮಹಾಲಿಂಗಪ್ಪ ಕಂಠಿ ಮಾತನಾಡಿ, ಸಮಾಜ ಸೇವಕ ಚನಬಸು ಹುರಕಡ್ಲಿ ಅವರು ತಮ್ಮ ಹೆತ್ತವರ ಸ್ಮರಣಾರ್ಥ ಉಚಿತ ಆರೋಗ್ಯ ಶಿಬಿರ, ಮಹಿಳೆಯರಿಗಾಗಿ ಹೊಲಿಗೆ ತರಬೇತಿ, ಉಚಿತ ಯೋಗ ಶಿಬಿರ ಸೇರಿದಂತೆ ವರ್ಷವಿಡೀ ನಿರಂತರ ಸಮಾಜ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಹುರಕಡ್ಲಿಯವರು ಸರ್ಕಾರಿ ಶಾಲಾ ಮಕ್ಕಳೊಂದಿಗೆ ಸರಳವಾಗಿ ಜನ್ಮ ದಿನ ಆಚರಿಸಿಕೊಂಡಿದ್ದು ಶ್ಲಾಘನೀಯ ಎಂದರು.

ಶಾಲೆಯ ಮುಖ್ಯ ಗುರು ಮಾತೆ ಎ. ವ್ಹಿ. ಕುಂದಗೋಳ, ಶಿಕ್ಷಕಿಯರಾದ ಎನ್. ಎಂ. ಗೌಡರ, ಜಿ. ಜಿ. ವೇರ್ಣೇಕರ, ಎಸ್. ಬಿ. ಕುಳ್ಳೋಳ್ಳಿ, ಎಸ್. ಎಚ್. ಬುರುಡ, ವ್ಹಿ. ಎಸ್. ಸೋರಗಾಂವಿ, ಎಸ್. ಎ. ಶಿವಸಿಂಪಿಗೇರ, ಅತಿಥಿ ಶಿಕ್ಷಕ ಡಿ. ಎಂ. ಮಾಲಾಪೂರ,

ಬಸವ ನಗರದ ಹಿರಿಯರಾದ ಸಂಜೀವ ಬಾರಕೋಲ, ಪ್ರಕಾಶ ಬಾಡನವರ, ಶ್ರೀಶೈಲ ಬಳಗಾರ, ಮಹಾದೇವಪ್ಪ ಟಿರ್ಕಿ, ಅಶೋಕ ಶಿರೋಳ, ಬಸವರಾಜ ಗಿರಿಸಾಗರ, ಬಸು ತೇಲಿ, ರವಿ ಗಿರಿಸಾಗರ, ಕುಮಾರ ಮನವಡೆ, ಮಹಾಂತೇಶ ಪಾತ್ರೋಟ, ಸಿಂಧೂರ ಹಲಸಪ್ಪಗೋಳ, ಮಲ್ಲಪ್ಪ ಟಿರ್ಕಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

## ಸಾಧಕರ ಸನ್ಮಾನಕ್ಕೆ ಅರ್ಜಿ ಆಹ್ವಾನ

**ರಬಕವಿ-ಬನಹಟ್ಟಿ :** ಜನೇವರಿ 26 ರಂದು ನಡೆಯಲಿರುವ ಗಣರಾಜ್ಯೋತ್ಸವದಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಸಾಧಕರನ್ನು ಸನ್ಮಾನಿಸಲಾಗುತ್ತಿದ್ದು, ಅರ್ಹ ಸಾಧಕರು ತಮ್ಮ ಸ್ವ ವಿವರದೊಂದಿಗೆ ರಬಕವಿ-ಬನಹಟ್ಟಿ ತಹಶೀಲ್ದಾರ ಕಾರ್ಯಾಲಯದಲ್ಲಿ ಜನೇವರಿ 20 ರ ಸಂಜೆ 5-30 ರ ಒಳಗಾಗಿ ಅರ್ಜಿ ಸಲ್ಲಿಸಲು ತಹಶೀಲ್ದಾರ ಗಿರೀಶ ಸ್ವಾದಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಅಂಗವಿಕಲರ ಸಂಘಕ್ಕೆ ನೇಮಕ




**ರಬಕವಿ-ಬನಹಟ್ಟಿ :** ಕರ್ನಾಟಕ ರಾಜ್ಯ ಸರ್ಕಾರಿ ಅಂಗವಿಕಲ ನೌಕರರ ಸಂಘ (ರಿ) ಬೆಂಗಳೂರು ಇದರ ತಾಲೂಕು ಘಟಕದ ಗೌರವ ಅಧ್ಯಕ್ಷರಾಗಿ ಎನ್. ಎಮ್. ಗುರ್ಲಹೊಸೂರ, ಅಧ್ಯಕ್ಷರಾಗಿ ವಿಜಯಕುಮಾರ ಹಲಕುರ್ಕಿ, ಉಪಾಧ್ಯಕ್ಷರಾಗಿ ಭರತೇಶ ಯಲ್ಲಟ್ಟಿ, ಪ್ರಧಾನ ಕಾರ್ಯದರ್ಶಿ ಆರ್. ಬಿ. ಹೋಟಕರ, ಖಜಾಂಚಿ ಐ. ಪಿ. ಕುಂಬಾರ, ಸಹ ಕಾರ್ಯದರ್ಶಿ ಆರ್. ಪಿ. ಈಟಿ, ಸಂಘಟನಾ ಕಾಯ9ದರ್ಶಿ ಬಿ. ಸಿ. ಬಾಡಗಿ, ಮಹಿಳಾ ಸಂಘಟನಾ ಕಾರ್ಯದರ್ಶಿ ಶ್ರೀಮತಿ ಎಸ್. ಬಿ. ಮಂಟೂರ, ಶ್ರೀಮತಿ ಉಮಾ ಖವಟಕೊಪ್ಪ, ಸಾಂಸ್ಕೃತಿಕ ಕಾರ್ಯದರ್ಶಿ ಬಿ. ಜಿ. ಬಂಗೇರ, ಎಚ್. ಸಿ. ಹನಗಂಡಿ, ಕ್ರೀಡಾ ಕಾರ್ಯದರ್ಶಿ ಕೆ. ಬಿ. ನಡುವಿನಮನಿ, ಅಸ್ಲಂ ಲಾಡಖಾನ ಅವರನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾಧ್ಯಕ್ಷ ರಮೇಶ ಆಲಗುಂಡಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ನಿಧನ ವಾರ್ತೆಗಳು

### ವಿಜಯ ಶಂಕರ ಪುಂಡೆ



**ಬನಹಟ್ಟಿ :** ಇಲ್ಲಿಯ ಬಸ್ ನಿಲ್ದಾಣ ಹತ್ತಿರದ ನಿವಾಸಿ ಮರಾಠಾ ಸಮಾಜದ ವಿಜಯ ಶಂಕರ ಪುಂಡೆ ತಮ್ಮ 75 ನೆಯ ವಯಸ್ಸಿನಲ್ಲಿ ಜನೇವರಿ 14 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಐವರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಈರಪ್ಪ ಗಿ. ಪೂಜಾರಿ



**ಬನಹಟ್ಟಿ :** ಇಲ್ಲಿಯ ಗೃಹ ರಕ್ಷಕ ದಳದ ಕಮಾಂಡರ ಹಾಗೂ ಕೆಎಸ್ಆರ್ಟಿಸಿ ಚಾಲಕನಾಗಿದ್ದ ಈರಪ್ಪ ಗಿ. ಪೂಜಾರಿ ತಮ್ಮ 48 ನೆಯ ವಯಸ್ಸಿನಲ್ಲಿ ಜನೇವರಿ 15 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಪತ್ನಿ, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

### ಶಂಕರೆಪ್ಪ ದಡ್ಡೆನ್ನವರ



**ಬನಹಟ್ಟಿ :** ಇಲ್ಲಿಯ ನಿವಾಸಿ ಶಂಕರೆಪ್ಪ ದಡ್ಡೆನ್ನವರ ತಮ್ಮ 95 ನೆಯ ವಯಸ್ಸಿನಲ್ಲಿ ಜನೇವರಿ 15 ರಂದು ನಿಧನರಾದರು. ಮೃತರು ತಮ್ಮ ಹಿಂದೆ ಐದು ಜನ ಪುತ್ರಿಯರು, ಇಬ್ಬರು ಪುತ್ರರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

# ಎಲ್ಲ ಸಂಪತ್ತಿಗಿಂತ ಆರೋಗ್ಯ ಸಂಪತ್ತು ದೊಡ್ಡದು: ಡಾ. ಪ್ರಭುಗೌಡ

**ತಾಳಿಕೋಟೆ :** ಮನುಷ್ಯನಿಗೆ ಎಷ್ಟೋ ಕೋಟಿ ಹಣ, ಆಸ್ತಿ, ಎಲ್ಲ ಸಂಪತ್ತು ಗಳಿಸಬಹುದು ಆದರೆ ಆರೋಗ್ಯ ಸಂಪತ್ತು ಕೆಟ್ಟು ಹೋದರೆ ಎಲ್ಲ ಸಂಪತ್ತು ಇದ್ದರೂ ವ್ಯರ್ಥವಾಗುತ್ತದೆ ಹೀಗಾಗಿ ಮೊದಲು ಆರೋಗ್ಯವಂತರಾಗಿ ಬಾಳುವದರ ಕಡೆಗೆ ಎಲ್ಲರೂ ಗಮನ ಕೊಡಬೇಕೆಂದು ವಿಜಯಪುರ ಅನುಗ್ರಹ ಕಣ್ಣಿನ ಆಸ್ಪತ್ರೆಯ ನೇತ್ರ ತಜ್ಞವೈದ್ಯರಾದ ಡಾ.ಪ್ರಭುಗೌಡ ಲಿಂಗದಳ್ಳಿ ಅವರು ಹೇಳಿದರು.

ಮಂಗಳವಾರರಂದು ತಾಲೂಕಿನ ಬಳಗಾನೂರ ಗ್ರಾಮದಲ್ಲಿ ಶ್ರೀ ನೀಲಗಂಗಾಂಬಿಕಾದೇವಿ ಜಾತ್ರೋತ್ಸವ ಅಂಗವಾಗಿ ಕನ್ನಡ ಜಾನಪದ ಪರಿಷತ್ ಜಿಲ್ಲಾ ಘಟಕ ಮತ್ತು ತಾಲೂಕಾ ಘಟಕದ ವತಿಯಿಂದ ಆಯೋಜಿಸಲಾದ ಸಂಕ್ರಾಂತಿ ಜಾನಪದ ಸಂಭ್ರಮ ಕಾರ್ಯಕ್ರಮವನ್ನು ದೀಪ ಬೆಳಗಿಸುವದರೊಂದಿಗೆ ಉದ್ಘಾಟಿಸಿ ಮಾತನಾಡುತ್ತಿದ್ದ ಅವರು ಹಿಂದಿನಕಾಲದಲ್ಲಿ ರೊಟ್ಟಿ ಪಲ್ಲೆ, ಮುಟಗಿ ತಿಂದು ಗಟ್ಟಿ ಮುಟ್ಟಾದ ದೇಹದ ಜೊತೆಗೆ ಆರೋಗ್ಯವಂತರಾಗಿ ನೂರಾರು ವರ್ಷಗಳ ಕಾಲ ಬಧುಕುತ್ತಿದ್ದರು ಆದರೆ ಇಂದು ಚೈನಿಸ್ ಪುಡ್ ವ್ಯಾಮೋಹಕ್ಕೆ ಬಲಿಯಾಗಿ ಸಂಜೆಯಾದರೆ ದಾಬಾ, ಬಾರು ಇನ್ನಿತರ ಕಡೆಗೆ ಹೋಗಿ ಆರೋಗ್ಯವನ್ನು ಆಳು ಮಾಡಿಕೊಳ್ಳುತ್ತಾ ಸಾಗಿರುವದು ಆಂತಕದ ವಿಷಯವಾಗಿದೆ ಇಂದಿನ ಜಾನಪದ ಸಂಭ್ರಮದಲ್ಲಿ ಜೋಳದ ಗಿಡ, ಗೋದಿ, ಗಿಡಗಳ ಜೊತೆಗೆ ದೇಹಕ್ಕೆ ಪುಷ್ಠಿ ನೀಡುವಂತಹ ಆರೋಗ್ಯ ಭರಿತವಾದಂತಹ ಆಹಾರವನ್ನು ಪ್ರದರ್ಶಿಸಿ ಸಂಕ್ರಾಂತಿಯ ಸೊಬಗಿನೊಂದಿಗೆ ನಮ್ಮ ಮೂಲ ಬೇರು



ಜನಪದವನ್ನು ಉಳಿಸಿ ಬೆಳೆಸುವ ಕಡೆಗೆ ಬಳಗಾನೂರ ಗ್ರಾಮದ ಜನರು ಮುಂದಾಗಿರುವದು ಸಂತಸದ ಸಂಗತಿಯಾಗಿದೆ ಜೀವನವೆಂಬುದು ಒಳ್ಳೆಯ ಸಂಸ್ಕೃತಿಯನ್ನು ಬಿಂಬಿಸುವಂತಹದ್ದಾಗಿದ್ದು ಇದುವೇ ಜನಪದ ಸಾಹಿತ್ಯವಾಗಿದೆ

ಜನಪದವು ಜೀವನದ ಮೌಲ್ಯರೂಪಿಸಿದ್ದಲ್ಲದೇ ಸಾಹಿತ್ಯ ನಿರ್ಮಾಣಕ್ಕಾಗಿಯೇ ಮೂಲ ಬೇರಾಗಿದೆ ಕೃಷಿ ಕಾಯಕದಲ್ಲಿ ಬೇಸರಕೆ ಕಳೆದುಕೊಳ್ಳಲು ವಿವಿಧ ನಮುನೆಯ ಜನಪದ ಕಟ್ಟಿ ಹಾಡಿದವರು ಜನಪದದವರೇ ಆಗಿದ್ದಾರೆ ಜನಪದವೆಂಬುದು ಇದೊಂದು ಸಾಹಿತ್ಯವಾಗಿದೆ ಭೂಮಿಗೆ ತಾಯಿ ಎಂಬ ಸ್ಥಾನಮಾನ ನೀಡಲಾಗಿದ್ದು ಭೂಮಿ, ಗಿಡ, ಮರ, ಪ್ರಕೃತಿ, ಸೌಂದರ್ಯವನ್ನು ನಿರ್ಮಿಸಿದ್ದನ್ನು ಮರೆಯುವಂತಿಲ್ಲಾ ಎಂದರು.

ಇನ್ನೋರ್ವ ರಾಜ್ಯ ಪ್ರಶಸ್ತಿ ಪುರಸ್ಕೃತಿ ಅರವಿಂದ ಕೊಪ್ಪ ಅವರು ಮಾತನಾಡಿ ಹಬ್ಬಗಳಲ್ಲಿ ಜಾನಪದ ಸಾಹಿತ್ಯ ಮೇರಗು ತರುವಲ್ಲಿ ಗ್ರಾಮಾಂತರ ಮಟ್ಟದಲ್ಲಿ ತನ್ನ ಕಾರ್ಯವನ್ನು ಮುಂದುವರೆಸಿದೆ ಕನ್ನಡ ಜಾನಪದವನ್ನು ಶ್ರೀಮಂತಗೊಳಿಸುವ ಕಾರ್ಯ ಮಾಡಿದರೆ ಶರಣರ ಪರಿಚಯವಾಗಲಿದೆ ಎಂದರು.

ಜನಪದವೆಂಬುದು ಇಂದಿನ ದಿನಮಾನದಲ್ಲಿ ಕುಂಠಿತಗೊಳ್ಳುತ್ತಾ ಸಾಗಿದೆ ಅದನ್ನು ಮೇಲೆತ್ತುವ ಕಾರ್ಯ ಕನ್ನಡ ಜಾನಪದ ಪರಿಷತ್ ಮಾಡುತ್ತಾ ಸಾಗಿದೆ ರೈತರಾಗಿರುವ ನಾವುಗಳು ಪ್ರಥಮವಾಗಿ ಮಣ್ಣನ್ನು ಪೂಜಿಸುವ ಮೂಲಕ ಜನಪದಕ್ಕೆ ಹೆಜ್ಜೆ ಹಾಕುತ್ತೇವೆ ಕೃಷಿ ಕಾಯಕವೆಂಬುದು ಅತ್ಯಂತ ಶ್ರೇಷ್ಠವಾಗಿದ್ದು ಯಾರೂ ಅದರಿಂದ ಹಿಂದಕ್ಕೆ ಸರಿಯಬಾರದು ಅದರಲ್ಲಿ ಲಾಭ ಹೇಗೆ ತೆಗೆಯಬೇಕೆಂಬುದರ ಕಡೆಗೆ ರೈತರಾದ ನಾವುಗಳು ಯೋಚನೆ ಮಾಡಬೇಕಿದೆ ನಾನು ನನ್ನ ಪತ್ನಿ ಉನ್ನತ ಶಿಕ್ಷಣವಂತರಾಗಿದ್ದರೂ ಕೂಡಾ ಕೃಷಿಯಲ್ಲಿ ನಿರತರಾಗುವದರ ಜೊತೆಗೆ ಮಕ್ಕಳನ್ನು ಕನ್ನಡ ಶಾಲೆಯಲ್ಲಿ ಓದಿಸಿ ಕೃಷಿಯಲ್ಲಿ ಆಸಕ್ತಿ ತುಂಬುವಂತಹ ಕಾರ್ಯ ಮಾಡಿದ್ದೇವೆಂದರು.

ಕಾರ್ಯಕ್ರಮದ ದಿವ್ಯ ಸಾನಿದ್ಯ ವಹಿಸಿದ್ದ ಇಂಗಳೇಶ್ವರ ವಚನಶಿಲಾ ಮಂಟಪದ ಶ್ರೀ ಚನ್ನಬಸವ ಮಹಾ ಸ್ವಾಮಿಗಳು ಮಾತನಾಡಿ ಜನಪದ ಸಂಸ್ಕೃತಿ ಇಂದು ಅಗತ್ಯವಾಗಿದೆ ಹಿಂದೆ ಕೃಷಿ ಕಾಯಕದಲ್ಲಿ ಹಂತಿ ಪದ, ಮನೆಯಲ್ಲಿ ಜೋಗೂಳ ಪದ ಕೇಳುತ್ತಿದ್ದೇವು ಆದರೆ ಇಂದು ಶಿನಿಮಾ ಶೈಲಿಯ ಹಾಡುಗಳು ನಮ್ಮ ಸಂಸ್ಕೃತಿಯನ್ನು ಹಾಳು ಮಾಡುತ್ತಿವೆ ಎಂದ ಅವರು ರೈತರು ಒಂದೇ ಬೆಳೆಯನ್ನು ನಂಬಿಕೊಂಡು ಹೋಗಬಾರದು ವಿವಿಧ ತರಹದ ಬೆಳೆಗಳನ್ನು ಬೆಳೆಯುವದರ ಜೊತೆಗೆ ಕೃಷಿ ಕಾಯಕವನ್ನು ಹೆಚ್ಚಿಸಿಕೊಳ್ಳಬೇಕೆಂದರು.

# 'ಯಲ್ಲಪ್ಪ ಜಿ.ರವರಿಗೆ ಹಂಪಿ ಕನ್ನಡ ವಿಶ್ವವಿದ್ಯಾಲಯದಿಂದ ಡಾಕ್ಟರೇಟ್ ಪದವಿ ಪ್ರಧಾನ'

**ಕಲಾದಗಿ :** ಡಾ. ನಟರಾಜ್. ಆರ್ ಇವರ ಮಾರ್ಗದರ್ಶನದಲ್ಲಿ "ಹೈದರಾಬಾದ್ ಕರ್ನಾಟಕದ ಸಣ್ಣಕಥೆಗಳಲ್ಲಿ ದಲಿತಲೋಕದ ಸ್ವರೂಪ " ಎನ್ನುವ ವಿಷಯದಮೇಲೆಕನ್ನಡಸಾಹಿತ್ಯಅಧ್ಯಯನವಿಭಾಗದಲ್ಲಿ ಸಂಶೋಧನೆ ಕೈಗೊಂಡು ಮಂಡಿಸಿದ ಪಿಎಚ್ಡಿ ಮಹಾ ಪ್ರಬಂಧಕ್ಕೆ ಹಂಪಿ ಕನ್ನಡ ವಿಶ್ವವಿದ್ಯಾಲಯವು ಡಾಕ್ಟರೇಟ್ ನೀಡಿ ಗೌರವಿಸಿದೆ...

ಕರ್ನಾಟಕದಲ್ಲಿಮೊಳಕಾಲ್ಮೂರು ಅತ್ಯಂತ ಹಿಂದುಳಿದ ತಾಲೂಕು. ಬಡತನ ಮತ್ತು ನಿರುದ್ಯೋಗ ಇಂದಿಗೂ ತೀರದ ಸಮಸ್ಯೆ. ಕೂಲಿ ಕಾರ್ಮಿಕ ವರ್ಗದ ಕುಟುಂಬಗಳೇ ಹೆಚ್ಚಾಗಿವೆ. ಇನ್ನು ಪರಿಶಿಷ್ಟರ ಬದುಕು ಹೇಳ ತೀರದು. ಆರ್ಥಿಕವಾಗಿ ಮತ್ತು ಶೈಕ್ಷಣಿಕವಾಗಿ ಇಂದಿಗೂ ಹೋರಾಟ ನಿಂತಿಲ್ಲ. ಇದರ ಮಧ್ಯೆ ಇರುವ ಸಂಪನ್ಮೂಲ, ಸೌಲಭ್ಯಗಳನ್ನು ಬಳಸಿಕೊಂಡು ಉನ್ನತ ಶಿಕ್ಷಣ ಪಡೆಯುವ ಪ್ರತಿಭೆಗಳಿಗೇನು ಕೊರತೆ ಇಲ್ಲ. ಬಡತನವೊಂದು ಓದಿಗೆ ನಿರ್ಣಾಯಕವಲ್ಲ. ನೂರು ಸಮಸ್ಯೆಗಳನ್ನು ಮೆಟ್ಟಿ ಕಠಿಣ ಪರಿಶ್ರಮದ ಮೂಲಕ ಯಾರು ಬೇಕಾದರೂ ಸಾಧಿಸಬಹುದು ಎನ್ನುವುದನ್ನು ಎಲ್ಲಪ್ಪ. ಜಿ ರವರು ಈ ಬಾರಿ ಹಂಪಿ ವಿಶ್ವವಿದ್ಯಾನಿಲಯದಿಂದ ಡಾಕ್ಟರೇಟ್ ಪದವಿ ಪಡೆದಿರುವುದೇ ಸಾಕ್ಷಿಯಾಗಿದೆ....

ಎಲ್ಲಪ್ಪ. ಜಿ ರವರು ಮೂಲತಃ ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮುರು ತಾಲೂಕಿನ ದೇವಸಮುದ್ರ ಹೋಬಳಿಯವೆಂಕಟಾಪುರಎನ್ನುವಕುಗ್ರಾಮದವರು. ಪರಿಶಿಷ್ಟ ಜಾತಿಗೆ ಸೇರಿದ ಬಡ ಕುಟುಂಬದ ಗಂಗಪ್ಪ ಹಾಗೂ ತಿಮ್ಮಕ್ಕ ಎನ್ನುವ ದಂಪತಿಗಳ ಮಗ. ಪ್ರಾಥ-ಮಿಕ ಶಿಕ್ಷಣವನ್ನು ವೆಂಕಟಾಪುರ, ಪ್ರೌಢಶಿಕ್ಷಣವನ್ನು



ಸರ್ಕಾರಿ ಪ್ರೌಢಶಾಲೆ ದೇವಸಮುದ್ರ ಹಾಗೂ ಪದವಿ ಪೂರ್ವ ಶಿಕ್ಷಣವನ್ನು ಸರ್ಕಾರಿ ಜೂನಿಯರ್ ಕಾಲೇಜ್ ಮೊಳಕಾಲ್ಮೂರಿನಲ್ಲಿ ವ್ಯಾಸಂಗ ಮಾಡಿದ್ದಾರೆ. ಬಿ. ಎ. ಪದವಿಯನ್ನು ಚಿತ್ರದುರ್ಗದ ಕಲಾ ಕಾಲೇಜ್ ನಲ್ಲಿ. ಬಿ.ಇಡಿ ಶಿಕ್ಷಕರ ತರಬೇತಿಯನ್ನು ಪಿ. ವಿ. ಎಸ್ ಶಿಕ್ಷಣ ಮಹಾವಿದ್ಯಾಲಯ ಚಿತ್ರದುರ್ಗದಲ್ಲಿ, ಒ.ಂ. ಪದವಿಯನ್ನು ನಂದಿಹಳ್ಳಿ ಸ್ನಾತಕೋತ್ತರ ಅಧ್ಯಯನ ಕೇಂದ್ರ, ಗುಲ್ಬರ್ಗ ವಿಶ್ವವಿದ್ಯಾನಿಲಯದಲ್ಲಿ ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಸ್ನಾತಕೋತ್ತರ ಪದವಿ 4ನೇ ಸೆಮಿಸ್ಟರ್ ಮುಗಿಯುವ ಹಂತ. ಆ ಪದವಿಯ ಕೊನೆಯ ಪರೀಕ್ಷೆ ಬರೆದು ಹಾಸ್ಟೆಲ್ ನಲ್ಲಿ ಇರುವಾಗ, ಅದೇ ಸಂಜೆ ಆರು ಏಳು ಗಂಟೆಯ ಸುಮಾರಿಗೆ ತನ್ನ ಸ್ನೇಹಿತರೊಬ್ಬರು ಕರೆ ಮಾಡಿಪ್ರೌಢಶಾಲಾಸಹಶಿಕ್ಷಕನಾಗಿಆಯ್ಕೆಯಾಗಿರುವ ವಿಷಯ ಹೊರ ಬಿತ್ತು. ಈ ಸಂದರ್ಭದಲ್ಲಿ ನಂದಿಹಳ್ಳಿ ಕೇಂದ್ರದ ಮುಖ್ಯಸ್ಥರಾದ ಡಾ. ಮಲ್ಲಿಕಾ ಘಂಟಿ ಮೇಡಂಅವರಪಾತ್ರಸ್ಮರಣೀಯವಾದದ್ದು.ಹೈಸ್ಕೂಲ್ ಶಿಕ್ಷಕನಾಗಿ 2008 ರಿಂದ 2023 ವರೆಗೆ ಅಂದರೆ 15 ವರ್ಷಗಳ ಕಾಲ ಮಕ್ಕಳಿಗೆ ಕನ್ನಡ ವಿಷಯ ಕುರಿತು ಬೋಧನೆ ಮಾಡಿದ್ದಾರೆ. ಈ ಸಂದರ್ಭದಲ್ಲಿ ಅನೇಕ ಬಾರಿ ಸಂಪನ್ಮೂಲ ಶಿಕ್ಷಕರಾಗಿ ಶಿಕ್ಷಕರಿಗೆ ತರಬೇತಿ ನೀಡಿರುತ್ತಾರೆ.

ಕಲಿಯುವ ಹಂಬಲ ಮತ್ತು ಆಸಕ್ತಿ ಯಾವುದೇ ಮನುಷ್ಯನನ್ನು ಸುಮ್ಮನೆ ಕೂರಿಸುವುದಿಲ್ಲ. ದಮನಿತ ಸಮುದಾಯಗಳಿಗೆ ಶಿಕ್ಷಣ ಹುಲಿಯ ಹಾಲು ಇದ್ದಂತೆ. ಅದನ್ನು ಕುಡಿಯುವ ಹಂಬಲ ಇರಾದೆ ಇದ್ದೇ ಇತ್ತು. ಹಾಗಾಗಿ 2018-19ನೇ ಸಾಲಿನಲ್ಲಿ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದಲ್ಲಿ ಪಿಎಚ್ .ಡಿ. ಪದವಿ ಪ್ರವೇಶ ಪಡೆದರು. ತಾವು ಕೆಲಸ ಮಾಡುವ ಸ್ಥಳಕ್ಕೆ ಸಮೀಪವಾಗುವಹಾಗೂವಿಶ್ವವಿದ್ಯಾಲಯದಮಾನ್ಯತ ಕೇಂದ್ರವಾದ ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು ಇಲ್ಲಿಗೆ ಪ್ರವೇಶ ದೊರೆಯಿತು. ಈ ಎರಡು ಸಾಂಸ್ಕೃತಿಕ ಕಲಿಕಾಕೇಂದ್ರಗಳಒಡನಾಟದಲ್ಲಿಅಧ್ಯಯನನಡೆದದ್ದು ಒಂದು ರೀತಿಯ ಖುಷಿಯ ವಿಚಾರವೇ.

ಕನಸುಗಳನ್ನು ಜೀವಂತವಾಗಿಡಲಿಕ್ಕೆ ಓದು ಅಗತ್ಯ. ಆ ಓದು ಕೇವಲ ಪದವಿಗಳಿಗಷ್ಟೇ ಸೀಮಿತಗೊಳಿಸದೆ ಬದುಕಿನ ನೆಲೆ ಕಂಡುಕೊಳ್ಳುವ ಹುಡುಕಾಟವು ನಡೆದಿದೆ. ಹೈಸ್ಕೂಲ್ ಶಿಕ್ಷಕನಾಗಿ ಅಷ್ಟಕ್ಕೆ ತೃಪ್ತನಾಗದೆ, 2021ರಲ್ಲಿಪ್ರಥಮದರ್ಜೆಕಾಲೇಜುಗಳಲ್ಲಿನಸಹಾಯಕ ಪ್ರಾಧ್ಯಾಪಕರ ಹುದ್ದೆಗಳಿಗೆ ಸ್ಪರ್ಧಾತ್ಮಕ ಪರೀಕ್ಷೆಯನ್ನು ಎದುರಿಸಿ, ಆಯ್ಕೆಯಾಗಿ 2024ರಲ್ಲಿ ಸರ್ಕಾರಿ ಪ್ರಥ-ಮ ದರ್ಜೆ ಕಾಲೇಜು ಕಲಾದಗಿ ಬಾಗಲಕೋಟೆ ತಾಲೂಕಿನಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ. ಇದು ಇವರ ಇನ್ನೊಂದು ಮೈಲುಗಲ್ಲು.

ಇಪ್ಪತ್ತು ಇಪ್ಪತ್ತೈದು ವರ್ಷಗಳ ಕಾಲ ಜೀತ ಮಾಡಿದ ವ್ಯಕ್ತಿಯೊಬ್ಬರಮಗಸತತಪ್ರಯತ್ನಹಾಗೂಪರಿಶ್ರಮದ ಹಾದಿಡಿದು ಸಾಗಿದ ಪಯಣ ಕುತೂಹಲಕಾ-ರಿಯಾದದ್ದು. ದಮನಿತರು ವಿಶ್ವವಿದ್ಯಾಲಯದ ಮೆಟ್ಟಲುಗಳನ್ನು ಹತ್ತುವುದು ಅಷ್ಟು ಸುಲಭವಲ್ಲ. ಹಿಂದೆ ಮುಂದೆ ಯಾವ ಶಕ್ತಿಗಳು ಇಲ್ಲದ ವ್ಯಕ್ತಿ ಓರ್ವ ಅಸಿಸ್ಟೆಂಟ್ ಪ್ರೊಫೆಸರ್ ಆಗಿ ನಿಂತ ಹೆಜ್ಜೆಗಳು ತೊಟ್ಟ ರೂಪಗಳು ಹಲವು.

ಪ್ರತಿಫಲಕ್ಕೆ ಪ್ರತಿಫಲನ ಇದ್ದೇ ಇರುತ್ತದೆ. ಈ ಮೇಲಿನ ಜರ್ನಿ ಹೂವಿನ ಹಾಸಿಗೆಯದ್ದಲ್ಲ. ಸವಾಲುಗಳನ್ನು ಸ್ವೀಕರಿಸಿ, ಮೆಟ್ಟಿ ನಿಂತು ಕನ್ನಡ ವಿಶ್ವವಿದ್ಯಾಲಯಕ್ಕೆ ಇವರು ಸಲ್ಲಿಸಿದ ಸಂಶೋಧನೆಯ ಮಹಾ ಪ್ರಬಂಧಕ್ಕೆ ಈ ಬಾರಿ ಡಾಕ್ಟರೇಟ್ ಪದವಿಯನ್ನು ಅತ್ಯುತ್ತಮ ದರ್ಜೆಯನ್ನು ನೀಡಿ ಗೌರವಿಸಿದೆ.

ಸಾರ್ಥಕದ ಕ್ಷಣಗಳು. ಇಂತಹ ಸಂದರ್ಭದಲ್ಲಿ ತಂದೆಯ ತ್ಯಾಗ ಮತ್ತು ಕುಟುಂಬದ ಶಕ್ತಿಗಳು ಬೇಕೇ ಬೇಕು ಎನ್ನುತ್ತಾರೆ. ಇಂತಹ ಸಾಮಾನ್ಯ ವ್ಯಕ್ತಿ ಎಲ್ಲಪ್ಪ. ಜಿ ರವರಿಗೆ ಕನ್ನಡ ವಿಶ್ವವಿದ್ಯಾನಿಲಯ ಡಾಕ್ಟರೇಟ್ ನೀಡಿ ಗೌರವಿಸಿರುವುದು ಪ್ರಶಂಸನೀಯವಾಗಿದೆ. ಅಲ್ಲದೆ ಇವರ ಈ ಸಾಧನೆಗೆ ಕನ್ನಡ ಸಾಹಿತ್ಯ ವಿಭಾಗದ ಮುಖ್ಯಸ್ಥರು, ಮಾರ್ಗದರ್ಶಕರು, ಉಪನ್ಯಾಸವರ್ಗ, ಶಿಕ್ಷಕ ವರ್ಗ, ಕುಟುಂಬ, ಸ್ನೇಹಿತರು, ಶಿಷ್ಯವರ್ಗ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ಡಾ. ಪಾಪು ಕನ್ನಡದ ಕಟ್ಟಾಳು ಆಗಿದ್ದರು: ಶಿವಶಂಕರ ಹಿರೇಮಠ

**ಧಾರವಾಡ :** ಪಾಟೀಲ ಪುಟ್ಟಪ್ಪನವರು ಪ್ರಾರಂಭಿಸಿದ 'ಪ್ರಪಂಚ' ಪತ್ರಿಕೆಓದುಗರಜ್ಞಾನ, ಪ್ರಪಂಚದಷ್ಟೇ ವಿಸ್ತಾರವಾಗಬೇಕು.ಪಾಪು ಅವರು ನಮ್ಮೆಲ್ಲರ ವ್ಯಕ್ತಿತ್ವ ನಿರ್ಮಿಸುವಲ್ಲಿ ಪ್ರಮುಖ ಪಾತ್ರ ವಹಿಸಿದವರು ಎಂದು ಶಿಕ್ಷಣ ಇಲಾಖೆಯ ನಿವೃತ್ತಜಂಟಿ ನಿರ್ದೇಶಕ ಶಿವಶಂಕರ ಹಿರೇಮಠಅಭಿಪ್ರಾಯಪಟ್ಟರು.

ಕರ್ನಾಟಕ ವಿದ್ಯಾವರ್ಧಕ ಸಂಘವು ರಾ.ಹ. ದೇಶಪಾಂಡೆಸಭಾಭವನದಲ್ಲಿಆಯೋಜಿಸಿದ್ದ ನಾಡೋಜಡಾ.ಪಾಟೀಲ ಪುಟ್ಟಪ್ಪಅವರ 105ನೇ ಜನ್ಮದಿನಾಚರಣೆಕಾರ್ಯಕ್ರಮದಲ್ಲಿ ಮಾತನಾಡುತ್ತಿದ್ದರು.

ಮುಂದುವರೆದು ಮಾತನಾಡಿದಅವರು, ಪಾಪು ಅವರು ನೇರ ನುಡಿಯ ಸ್ವತಂತ್ರ ವಿಚಾರಧಾರೆಯ ವ್ಯಕ್ತಿಗಳಾಗಿದ್ದರು.60ರ ದಶಕದಲ್ಲಿಅವರಜೊತೆ ಅವಿನಾಭಾವ ಸಂಬಂಧವನ್ನುಹೊಂದಿದ್ದೆವು.ಕರ್ನಾಟಕದ ಗಟ್ಟಿಧ್ವನಿಯಾದ ಪುಟ್ಟಪ್ಪನವರುಕನ್ನಡದ ಕಟ್ಟಾಳುಗಳಾಗಿದ್ದರು ಎಂದರು.

ಸಂಘದಕಾರ್ಯಾಧ್ಯಕ್ಷ ಬಸವಪ್ರಭು ಹೊಸಕೇರಿ ಮಾತನಾಡಿ, ಪಾಪು ಅವರ ಪತ್ರಿಕೆ ಪ್ರಪಂಚದಲ್ಲಿ ಏನಿಲ್ಲಾಎನ್ನುವುದ ಕ್ಕಿಂತಎಲ್ಲವನ್ನು ಒಳಗೊಂಡಿತ್ತು.ಅವರೊಬ್ಬ ನೇರ, ನಿಷ್ಠುರಕನ್ನಡದಅಭಿಮಾನಿ.ಸತ್ಯ ದ ಪ್ರತಿಪಾದಕರಾದಅವರುಜೀವನದು



ದ್ದಕ್ಕೂಕನ್ನಡ ಭಾಷೆ ಮತ್ತು ಸಂಸ್ಕೃತಿಗಾಗಿ ಹೋರಾಡಿದರು.ಕನ್ನಡ ಮಾತನಾಡುವ ಪ್ರದೇಶಗಳು ಕರ್ನಾಟಕವನ್ನು ಬಿಟ್ಟು ಹೋಗಿದ್ದನ್ನುಕಂಠಪಾಠ ಮಾಡಿದಂತೆತಮ್ಮ ಕಳಕಳಿಯನ್ನು ವ್ಯಕ್ತಪಡಿಸುತ್ತಿದ್ದರು. ಹುಬ್ಬಳ್ಳಿ ಮತ್ತುಧಾರವಾಡದಲ್ಲಿ ಪುಟ್ಟಪ್ಪನವರ ಹೆಸರಿನಿಂದ ಮುಖ್ಯ ಮಾರ್ಗಗಳಿಲ್ಲದಿರುವುದು ವಿಷಾಧನೀಯಕನ್ನಡ ಕಾವಲು ಸಮಿತಿಯಅಧ್ಯಕ್ಷರಾಗಿಸರಕಾರಿಕಚೇರಿಗಳಲ್ಲಿ ಕನ್ನಡದ ಆಡಳಿತ ಭಾಷೆಯಾಗಬೇಕೆಂದು ಅಹರ್ನಿಶಿ ಕಾರ್ಯನಿರ್ವಹಿಸಿದ ಅಂತಹ ಪ್ರಾತಃಸ್ಮರಣಿಯರನ್ನು ಸ್ಮರಿಸುವಂಥ ಕಾರ್ಯ ನಿರಂತರವಾಗಬೇಕೆಂದರು.

ಸಂಘದಉಪಾಧ್ಯಕ್ಷೆ ಪ್ರೊ. ಮಾಲತಿ ಪಟ್ಟಣಶೆಟ್ಟಿಮಾತನಾಡಿ,ಪ್ರಪಂಚಪತ್ರಿಕೆಯಲ್ಲಿ ಮುದ್ರಣವಾಗುತ್ತಿದ್ದಅನುಭವದಲ್ಲಿಅಮೃತ ತ್ವವಿದೆ ಎಂಬ ಅಂಕಣಓದುಗರಿಗೆ ಬದುಕಿನ ಪಾಠವನ್ನು ಕಲಿಸಿ, ಅಮೃತ ಸವಿಯನ್ನು ನೀಡಿದಅಂಕಣವಾಗಿತ್ತು. ಎಲ್ಲರನ್ನೂ ಪ್ರೀತಿಸುವುದುಅವರದೊಡ್ಡಗುಣವಾಗಿತ್ತು.

ಸಂಘದ ಪ್ರಧಾನ ಕಾರ್ಯದರ್ಶಿ ಶಂಕರ ಹಲಗತ್ತಿ ವಿ.ಎಸ್. ಮಾಳಿ ಮತ್ತುಡಾ. ಬಾಳಣ್ಣಾ ಶೀಗೀಹಳ್ಳಿ ಅವರು ಪುಟ್ಟಪ್ಪನವರಕುರಿತು ಬರೆದ ಲೇಖನಗಳನ್ನು ವಾಚಿಸಿ ಪ್ರಾಸ್ತಾವಿಕವಾಗಿ ಮಾತನಾಡುತ್ತಾ, ದುರಂತವೆಂದರೆ ಕ.ವಿ.ವ. ಸಂಘ ಕಳೆದ ಮೂರು ವರ್ಷಗಳಿಂದ ನಿರಂತರವಾಗಿ ಪಾಟೀಲ ಪುಟ್ಟಪ್ಪನವರ ಹೆಸರಿನಟ್ರಸ್ಟ್‌ರಚನೆಗೆಒತ್ತಾಯಿಸುತ್ತಿದ್ದರೂ ಸರಕಾರಅದಕ್ಕೆ ಸ್ಪಂದಿಸದಿರುವುದು ವಿಷಾಧನೀಯ. ನಾಡು, ನುಡಿಗಾಗಿ ತಮ್ಮ ಜೀವನವನ್ನೇ ಮುಡುಪಾಗಿಟ್ಟಅಂಥವರ ಹೆಸರಿನಲ್ಲಿಟ್ರಸ್ಟ್‌ರಚನೆಯಾಗಬೇಕು. ಹಂಪಿ ವಿಶ್ವವಿದ್ಯಾಲಯಕ್ಕೆ ಪಾಟೀಲ ಪುಟ್ಟಪ್ಪಕನ್ನಡ ವಿಶ್ವವಿದ್ಯಾಲಯಎಂದು ಮರುನಾಮಕರಣ ಮಾಡಬೇಕೆಂದು ಸಂಘದಆಗ್ರಹಿಸುತ್ತದೆಎಂದರು.

ಆರಂಭದಲ್ಲಿ ಸಂಘದ ಸಂಸ್ಥಾಪಕರಾದ ಶ್ರೀ ರಾ.ಹ.ದೇಶಪಾಂಡೆಅವರ ಪುತ್ಥಳಿಗೆ ಮತ್ತು ನಾಡೋಜಡಾ. ಪಾಟೀಲ ಪುಟ್ಟಪ್ಪಅವರ ಪುತ್ಥಳಿಗೆಮಾಲಾರ್ಪಣೆಮಾಡಿಭಾವಚಿತ್ರಕ್ಕೆ ಪುಷ್ಪ ಸಮರ್ಪಿಸಲಾಯಿತು.ವೇದಿಕೆ ಮೇಲೆ ಗಣ್ಯರು ಪಾಪುರವರ ಭಾವಚಿತ್ರಕ್ಕೆಗೌರವ ಸಮರ್ಪಿಸಿದರು.

ಕಾರ್ಯಕ್ರಮದಲ್ಲಿ ಸತೀಶತುರಮರಿ, ವೀರಣ್ಣಒಡ್ಡೀನ, ಶ್ರೀಮತಿ ವಿಶ್ವೇಶ್ವರಿ ಬ. ಹಿರೇಮಠ, ಶಿವಾನಂದ ಭಾವಿಕಟ್ಟಿ ಹಾಗೂ ನಿಂಗಣ್ಣಕುಂಟಿ, ಮಂಜುಳಾ ಹಾರೋಗೊಪ್ಪ, ಡಾ.ಲಿಂಗರಾಜಅಂಗಡಿ, ಶಂಕರಲಿಂಗ ಶಿವಳ್ಳಿ, ಎಸ್.ಜಿ. ಪಾಟೀಲ, ಮಹಾಂತೇಶ ನರೇಗಲ್ಲ, ಡಾ.ಚಿದಾನಂದ ಮನಸೂರ, ಶ್ರೀಶೈಲಗೌಡ ಕಮತರ, ಪ್ರಮೀಳಾ ಜಕ್ಕಣ್ಣವರ, ಸೈಯ್ಯದ ನರೇಗಲ್ಲ, ಭೂಷಣ ಹಿರೇಮಠ, ಕೌಜಲಗಿ, ಸುನೀತಿತೆಂಗಿನಕಾಯಿ, ಧರ್ಮಣ್ಣಕುಂಭಾರ ಸೇರಿದಂತೆ ಸಂಘದ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ಸಂಭ್ರಮದ ತೆಪ್ಪೋತ್ಸವ



**ನವಲಗುಂದ :** ತಾಲ್ಲೂಕಿನ ಶಿರೂರ ಗ್ರಾಮದಲ್ಲಿ ಮಂಗಳವಾರ ಮಕರ ಸಂಕ್ರಾಂತಿ ನಿಮಿತ್ತವಾಗಿ ಶ್ರೀ ಬಾಲಲೀಲ ಸಂಗಮೇಶ್ವರ ತೆಪ್ಪೊ?ಪೀತ್ಸವ ಸಾವಿರಾರು ಭಕ್ತಾದಿಗಳ ಹರ್ಷೋದ್ಘಾರಗಳ ಮಧ್ಯ ಸಂಭ್ರಮದಿಂದ ಜರುಗಿತು.

ತೆಪ್ಪೊಪೀತ್ಸವದ ಅಂಗವಾಗಿ ಸಂಗಮೇಶ್ವರ ದೇವನಿಗೆ ವಿಶೇಷ ಅಲಂಕಾರ ಹಾಗೂ ಪೂಜೆ ಮಾಡಲಾಗಿತ್ತು. ಜನ ಬೆಳಗ್ಗೆ ಮಲಪ್ರಭಾ ಬಲದಂಡೆಯ ಕಾಲುವೆಯಲ್ಲಿ ಪವಿತ್ರ ಸ್ನಾನ ಮಾಡಿದರು. ಸಂಜೆ ನಡೆದ ಬಾಲಲೀಲಾ ಸಂಗಮೇಶ್ವರ ತೆಪ್ಪೊ?ತ್ಸವದಲ್ಲಿ ಪಾಲ್ಗೊಂಡರು. ತಾವು ತಂದಿದ್ದ ಜೋಳದ ರೊಟ್ಟಿ, ಪಲ್ಯ ಸೇರಿದಂತೆ ವಿವಿಧ ಭಕ್ಷ್ಯ ಭೋಜನಗಳನ್ನು ಸವಿದರು.

ಗ್ರಾಮದ ಸುತ್ತಮುತ್ತಲಿನ ಆಯಟ್ಟಿ, ಗುಮ್ಮಗೋಳ, ಬ್ಯಾಲ್ಯಾಳ, ಮೊರಬ, ಗರಗ, ಲೋಕೂರು, ಬೆಟಗೇರಿ, ಹಾರೋಬೇಳವಡಿ, ಇನಾಮಹೊಂಗಲ್, ಅಮ್ಮಿನಭಾವಿ ಸೇರಿದಂತೆ ವಿವಿಧ ಊರುಗಳಿಂದ ಆಗಮಿಸಿದ್ದ ಜನರು ತೆಪ್ಪೊಪೀತ್ಸವದಲ್ಲಿ ಭಾಗವಹಿಸಿ ರಾತ್ರಿ ನಡೆದ ನಾಟಕವನ್ನು ವೀಕ್ಷಿಸಿದರು.

# ಸ್ವಾಮಿ ವಿವೇಕಾನಂದರ ಆದರ್ಶ ಸ್ಫೂರ್ತಿ

**ಧಾರವಾಡ :** ಸ್ವಾಮಿ ವಿವೇಕಾನಂದರ ಆದರ್ಶಗಳು ಯುವ ಪೀಳಿಗೆಗೆ ಸ್ಪೂರ್ತಿ ಮತ್ತು ಆದರ್ಶಪ್ರಾಯವಾಗಿದೆ ಎಂದು ಧಾರವಾಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಹಿರಿಯ ಸಿವಿಲ್ ನ್ಯಾಯಾಧೀಶರಾದ ಪರಸುರಾಮ ಎಫ್ ದೊಡ್ಡಮನಿ ಅವರು ಹೇಳಿದರು.

ನೆಹರು ಯುವ ಕೇಂದ್ರ, ಧಾರವಾಡ. ಮೇರಾ ಯುವ ಭಾರತ, ಧಾರವಾಡ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆದರ್ಶ ಮಹಿಳಾ ಸಾಂಸ್ಕೃತಿಕ ಕಲಾ ಸಂಘ,ಕರ್ನಾಟಕ ರಾಜ್ಯ ಯುವಕ ಸಂಘಗಳ ಒಕ್ಕೂಟ ಇವರುಗಳ ಸಂಯುಕ್ತಾಶ್ರಯದಲ್ಲಿ ಸಿ.ವಿ.ರಾಮನ್ ಪದವಿ ಪೂರ್ವ ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಸ್ವಾಮಿ ವಿವೇಕಾನಂದರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಯುವ ಜನತೆ ತಂದೆ-ತಾಯಿ ಗುರುಗಳನ್ನು ಗೌರವಿಸಬೇಕು. ಜೀವನದಲ್ಲಿ ಉನ್ನತ ಗುರಿ ಇಟ್ಟುಕೊಂಡು ಸತತ ಪ್ರಯತ್ನದಿಂದ ಸಮಾಜದಲ್ಲಿ ಮಾದರಿ ವ್ಯಕ್ತಿಯಾಗಿ ಬಾಳಬೇಕು ಹಾಗೂ ವಿವೇಕಾನಂದರು ತಮ್ಮ ಬದುಕಿನುದ್ದಕ್ಕೂ ದೇಶದ ಯುವಕರು



ತಮಗಾಗಿ ಬದುಕದೆ ಸಮಾಜಕ್ಕಾಗಿ ಬದುಕಿ ಬಾಳಿ ಎಂಬ ಸಂದೇಶ ನೀಡಿದ್ದಾರೆ ಎಂದರು.

ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಧಾರವಾಡ ಜರ್ನಲಿಸ್ಟ್ ಗಿಲ್ಡ್ ಅಧ್ಯಕ್ಷರಾದ ಡಾ. ಬಸವರಾಜ ಹೊಂಗಲ್ ಮಾತನಾಡಿ ಸ್ವಾಮಿ ವಿವೇಕಾನಂದರು ಭಾರತ ದೇಶದ ಶ್ರೇಷ್ಠ ಆಧ್ಯಾತ್ಮೀಕ ಗುರು ಮತ್ತು ವಿಶ್ವ ಚಿಂತಕರು ಅವರು ದೇಶ ಕಟ್ಟಲು ಯುವಕರಿಗೆ ನೀಡಿದ ಪ್ರೇರಣೆ ಇಂದಿಗೂ ಮಾರ್ಗದರ್ಶನವಾಗಿದೆ ಹಾಗೂ ಯುವ ಜನರೇ ಸಮಾಜದ ಶಕ್ತಿ ಮತ್ತು ಉತ್ತಮ ನಾಯಕರಾಗುವ ಸಾಮರ್ಥ್ಯ ನಿಮ್ಮಲಿದೆ ಎಂದು ಹೇಳಿದರು.

ಕಾಲೇಜಿ ಪ್ರಾಚಾರ್ಯರಾದ ಅನುರಾಧಾ ಆರಾಧ್ಯಮಠ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿಮಾತನಾಡಿಉತ್ತಮಆಲೋಚನೆಗಳು ಮನುಷ್ಯನ ವ್ಯಕ್ತಿತ್ವ ರೂಪಿಸುತ್ತದೆ ಇದಕ್ಕೆ ಸ್ವಾಮಿ ವಿವೇಕಾನಂದರ ವಿಚಾರಗಳೇ ಸಾಕ್ಷಿ. ಯುವ ಜನರಲ್ಲಿ ಇಚ್ಚಾಶಕ್ತಿ, ಸದೃಢ ಸಂಕಲ್ಪ, ಸಾಧಿಸುವ ಛಲ ಇದ್ದರೆ ಗುರಿ ಮುಟ್ಟುವುದು ಸುಲಭ ಎಂದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಕಾರ್ಯದರ್ಶಿಯಾದ ಗಿರೀಶ ಹಾದಿಮನಿ ಹಾಗೂ ಆಡಳಿತ ಅಧಿಕಾರಯಾದ ದುಂಡಯ್ಯಾ ಹಿರೇಮಠ ಮತ್ತು ನೆಹರು ಯುವ ಕೇಂದ್ರದ ಶಿವಾಜಿ ಕಡೆಪ್ಪನವರ, ಶ್ರೀಧರ ಭಜಂತ್ರಿ ಕಾಲೇಜಿನ ಸಿಬ್ಬಂದಿಗಳು ಇದ್ದರು.

ಇದೆ ಸಂದರ್ಭದಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇರಾದವರಿಗೆ ಪ್ರಶಸ್ತಿ ಪ್ರಮಾಣ ಪತ್ರ ನೀಡಿದರು. ಕಾರ್ಯಕ್ರಮದ ನಿರೂಪಣೆ ಅಂಬಿಕಾ ಇಂಡಿ, ವಂದನಾರ್ಪಣೆ ಬಸಮ್ಮ ಹಡಪದ ಸ್ವಾಗತ ಪ್ರೊ. ಮಾರುತಿ ಕದಂ.

# ಪ್ರಾಮಾಣಿಕವಾಗಿ ಜವಾಬ್ದಾರಿ ನಿರ್ವಹಿಸಲು ಕರೆ



**ನವಲಗುಂದ :** ಕೂಸಿನ ಮನೆಯಲ್ಲಿ ಮಕ್ಕಳ ಲಾಲನೆ ಪಾಲನೆ ಮಾಡುವುದು ನಿಮ್ಮ ಕರ್ತವ್ಯ ಆಗಿರುತ್ತದೆ ಈ ಸಂದರ್ಭದಲ್ಲಿ ಯಾವುದೇ ಬೇದಭಾವ ಮಾಡದೇ ತಮಗೆ ವಹಿಸಿದ ಜವಾಬ್ದಾರಿಯನ್ನು ಪ್ರಾಮಾಣಿಕವಾಗಿ ನಿರ್ವಹಿಸಿ ಎಂದು ಗ್ರಾಮ ಪಂಚಾಯತಿ ಸದಸ್ಯೆ ಮದುಮತಿ ರಾಯನಗೌಡ್ರ ಹೇಳಿದರು.

ಅವರು ತಾಲ್ಲೂಕಿನ ಮೊರಬ ಗ್ರಾಮದ ಶಿಶು ಪಾಲನಾ ಕೇಂದ್ರದಲ್ಲಿ ಕೂಸಿನ ಮನೆ ತರಬೇತಿ ಸಮಾರೋಪ ಸಮಾರಂಭ ಉದ್ದೇಶಿಸಿ ಮಾತನಾಡಿದ ಅವರು ಶಿಶು ಪಾಲನಾ ಕೇಂದ್ರದಲ್ಲಿ ಶುಚಿತ್ವವನ್ನು ಕಾಪಾಡಿ, ಮಕ್ಕಳಿಗೆ ಅರೋಗ್ಯಯುತ ಪುಷ್ಟಿ ಆಹಾರ ಕೊಡಬೇಕೆಂದು ಆರೈಕೆದಾರರಿಗೆ ತಿಳಿಸಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಮೇಲ್ವಿಚಾರಕಿ ಶೋಭಾ ಹಿರೇಮಠ ಮಾತನಾಡಿ ತರಬೇತಿ ಪಡೆದಿರುವ ಕೂಸಿನ ಮನೆಯ ಆರೈಕೆದಾರರು ತಮ್ಮ ಗ್ರಾಮ ಪಂಚಾಯತ ವ್ಯಾಪ್ತಿಯಲ್ಲಿ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಶ್ರಮಿಸಬೇಕು. ಕೂಸಿನ ಮನೆಯಲ್ಲಿ ಮಕ್ಕಳಿಗೆ ನೀಡುವ ಬಗ್ಗೆ ಸುರಕ್ಷತೆ ವಹಿಸಿ ಮಕ್ಕಳ ಸುರಕ್ಷತೆ ಜೊತೆಗೆ ಮಕ್ಕಳ ಪಾಲಕರಲ್ಲೂ ಕೂಸಿನ ಮನೆಯ ಕಾರ್ಯಕ್ಷಮತೆಯ ಬಗ್ಗೆ ವಿಶ್ವಾಸ ಮೂಡಿಸುವ ಕೆಲಸವನ್ನು ಆರೈಕೆದಾರರು ಮಾಡಬೇಕು ಎಂದರು.

ಗ್ರಾಂ ಪಂಚಾಯತಿ ಅಧ್ಯಕ್ಷೆ ಪಾರ್ವತೆವ್ವಾ ಜಾಲಿಹಾಳ ಕಾರ್ಯಕ್ರಮ ಉದ್ಘಾಟಿಸಿದರು.

ಈ ವೇಳೆ ಗ್ರಾಂ ಪಂ ಉಪಾಧ್ಯಕ್ಷ ಶಿವಯೋಗಿ ಮನಮಿ, ಯೋಗಪ್ಪ ಗೋಲನಾಯ್ಕರ, ಮಲನಗೌಡ ದಾನಪ್ಪಗೌಡ್ರು, ಪ್ರಕಾಶ್ ಅಕ್ಕಿ, ದ್ರಾಕ್ಷಾಯಿನಿ ಬಿಂಗಿ, ವಿ ಹೆಚ್ ರೊಟ್ಟಿಗವಾಡ ಸೇರಿದಂತೆ ಕೂಸಿನ ಮನೆಯ ಆರೈಕೆದಾರರು, ಸಯೋಜಕರು, ನೋಡಲ ಅಧಿಕಾರಿಗಳು ಉಪಸ್ಥಿತರಿದ್ದರು.

# ಈ ಭಾಗದ ರೈಲ್ವೆ ಯೋಜನೆಗಳಿಗೆ ಹೆಚ್ಚಿನ ಒತ್ತು: ಸಚಿವ ವಿ. ಸೋಮಣ್ಣ

**ಕೊಪ್ಪಳ :** ರೈಲ್ವೆ ಇಲಾಖೆಯಿಂದ ಕಲ್ಯಾಣ ಕರ್ನಾಟಕ, ಮುಂಬೈ ಕರ್ನಾಟಕ, ಮಧ್ಯ ಕರ್ನಾಟ ಭಾಗದ ರೈಲ್ವೆ ಯೋಜನೆಗಳಿಗೆ ಹೆಚ್ಚಿನ ಒತ್ತು ಕೊಡಲಾಗುತ್ತಿದೆ ಎಂದು ಜಲ ಶಕ್ತಿ ಮತ್ತು ರೈಲ್ವೆ ಖಾತೆಯ ರಾಜ್ಯ ಸಚಿವರಾದ ವಿ.ಸೋಮಣ್ಣ ಹೇಳಿದರು.

ಅವರು ಮಂಗಳವಾರ ಕೊಪ್ಪಳ ನಗರದ ಕುಷ್ಟಗಿ ರಸ್ತೆಯಲ್ಲಿ ನೈಋತ್ಯ ರೈಲ್ವೆ ವತಿಯಿಂದ ಆಯೋಜಿಸಲಾಗಿದ್ದ ರೈಲ್ವೆ ಮೇಲ್ಸೇತುವೆಯ ಉದ್ಘಾಟನೆ ಕಾರ್ಯಕ್ರಮವನ್ನು ನೆರವೇರಿಸಿ ಮಾತನಾಡಿದರು.

ದೇಶದ ವಿವಿಧೆಡೆ 10, 15, 20 ವರ್ಷದ ಬಹುತೇಕ ರೈಲ್ವೆ ಕಾಮಗಾರಿಗಳು ನೆನಗುದಿಗೆ ಬಿದ್ದಿದ್ದವು. ನರೇಂದ್ರ ಮೋದಿಜಿಯವರು ಪ್ರಧಾನ ಮಂತ್ರಿಗಳಾದ ಬಳಿಕ ಎಲ್ಲಾ ಕಾಮಗಾರಿಗಳು ತ್ವರಿತವಾಗಿ ಪೂರ್ಣಗೊಳ್ಳುವುದಲ್ಲದೇ ಅನೇಕ ಹೊಸ-ಹೊಸ ಯೋಜನೆ ಮತ್ತು ಕಾಮಗಾರಿಗಳು ಲೋಕಾರ್ಪಣೆಯಾಗಿ ಜಾರಿಯಾಗುತ್ತಿವೆ. ರೈಲ್ವೆ ಇಲಾಖೆಯ ನೇಮಕಾತಿ ಪರೀಕ್ಷೆಯನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕೊಡಬೇಕೆಂಬ ಸುಮಾರು 50 ವರ್ಷಗಳ ಬೇಡಿಕೆಯನ್ನು ಪ್ರಧಾನಿ ನರೇಂದ್ರ ಮೋದಿಜಿ ರವರು ಈಡೇರಿಸಿದ್ದು, ದೇಶದ 10 ರಾಜ್ಯ ಭಾಷೆಗಳಲ್ಲಿ ರೈಲ್ವೆ ಪರೀಕ್ಷೆ ಬರೆಯಬಹುದಾಗಿದೆ. ಕೇಂದ್ರ ಸರ್ಕಾರವು 25 ಸಾವಿರ ಕೋಟಿ ರೂ. ವೆಚ್ಚದಲ್ಲಿ ದೇಶದ ಅನೇಕ ರೈಲು ನಿಲ್ದಾಣಗಳ ಅಭಿವೃದ್ಧಿ ಮಾಡುತ್ತಿದ್ದೇವೆ. ಇದರಲ್ಲಿ ನಮ್ಮ ರಾಜ್ಯಕ್ಕೆ 2000 ಕೋಟಿ ರೂ. ಗಳನ್ನು ರೈಲು ನಿಲ್ದಾಣಗಳ ಅಭಿವೃದ್ಧಿಗೆ ಖರ್ಚು ಮಾಡಲಾಗುತ್ತಿದೆ. ಸಾಮಾನ್ಯ ಜನರು ಓಡಾಡುವ ರೈಲು ನಿಲ್ದಾಣಗಳ ಅಭಿವೃದ್ಧಿಗೆ ಒತ್ತು ನೀಡಲಾಗುತ್ತಿದೆ. ಅವುಗಳಲ್ಲಿ ಅಗತ್ಯ ಕುಡಿಯುವ ನೀರು, ಶೌಚಾಲಯ, ನಿರೀಕ್ಷಣಾ ಕೊಠಡಿ, ಕುಳಿತುಕೊಳ್ಳಲು ಆಸನಗಳ ವ್ಯವಸ್ಥೆ ಸೇರಿದಂತೆ ಎಲ್ಲಾ ರೀತಿಯ ಮೂಲಭೂತ ಸೌಕರ್ಯಗಳನ್ನು ಹೊಂದಿರಬೇಕೆಂಬ ಉದ್ದೇಶದಿಂದ ಹಲವಾರು ಅಭಿವೃದ್ಧಿ ಕಾಮಗಾರಿಗಳನ್ನು ಮಾಡಲಾಗುತ್ತಿದೆ ಎಂದರು.




ರಾಯದುರ್ಗಾ-ತುಮಕೂರು, ತುಮಕೂರು-ಚಿತ್ರದುರ್ಗಾ-ದಾವಣಗೇರೆ, ಗದಗ-ವಾಡಿ, ತುಮಕೂರು-ಚಿತ್ರದುರ್ಗಾ, ಕಡೂರು-ಚಿಕ್ಕಮಂಗಳೂರು-ಬೇಲೂರು ಸೇರಿದಂತೆ ರಾಜ್ಯದ ವಿವಿಧ ರೈಲು ಮಾರ್ಗಗಳಿಗಾಗಿ 29 ಸಾವಿರ ಕೋಟಿ ರೂ.ಗಳನ್ನು ಕೇಂದ್ರ ಸರ್ಕಾವು ನೀಡಿದ್ದು, ಎಲ್ಲಾ ಕಾಮಗಾರಿಗಳನ್ನು ಪ್ರಾರಂಭಿಸಲಾಗಿದೆ. ಈ ಕೆಲಸಗಳು ಪೂರ್ಣಗೊಳಿಸುತ್ತೇವೆ.

ರೈಲ್ವೆ ಸಂಪರ್ಕದಿಂದ ಕರ್ನಾಟಕದಲ್ಲಿ ಹೊಸ ಯುಗ ನಿರ್ಮಾಣವಾಗಲಿದೆ ಎಂದು ಹೇಳಿದರು. ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ ಅವರು ಮಾತನಾಡಿ, ಕುಷ್ಟಗಿ ರಸ್ತೆಯ ರೈಲ್ವೆ ಮೇಲ್ಸೇತುವೆಯು ಅತ್ಯವಶ್ಯಕವಾಗಿತ್ತು. ಇದರ ಉದ್ಘಾಟನೆಯಿಂದ ದಕ್ಷಿಣ ಭಾರತ ಕುಂಭಮೇಳ ಎಂದು ಹೆಸರಾದ ಶ್ರೀ ಗವಿಸಿದ್ದೇಶ್ವರ ಜಾತ್ರೆಗೆ ಆಗಮಿಸುವ ಭಕ್ತಾದಿಗಳ ಸಂಚಾರಕ್ಕೂ ಅನುಕೂಲವಾಗಿದೆ. ಈ ಸೇತುವೇ ನಿರ್ಮಾಣಕ್ಕಾಗಿ ಮಾಜಿ ಸಂಸದರಾದ ಕರಡಿ ಸಂಗಣ್ಣನವರ ಪ್ರಯತ್ನ ಬಹಳಷ್ಟಿದೆ. ಈ ಸೇತುವೆಗೆ ವೀರರಾಣಿ ಕಿತ್ತೂರು ಚೆನ್ನೆಮ್ಮನವರ ಹೆಸರಿಡಬೇಕೆಂಬುದು ಬಹು ಜನರ ಬೇಡಿಕೆಯಾಗಿದ್ದು, ಇದಕ್ಕೆ ಅನುಕೂಲ ಮಾಡಿಕೊಡಬೇಕು. ಬಾಗಲಕೋಟೆ-ಗಂಗಾವತಿ ಮತ್ತು ಗಂಗಾವತಿ-ದರೋಜಿ ರೈಲು ಮಾರ್ಗಗಳನ್ನು ಮಂಜೂರು ಮಾಡಿಕೊಡಬೇಕು. ಕೊಪ್ಪಳ ನಗರದ ಗಂಗಾವತಿ ರಸ್ತೆಯ ಮೆಡಿಕಲ್ ಕಾಲೇಜು ಹತ್ತಿರದ ಕಿಡಿದಾಳ ಗೇಟ್‌ನಲ್ಲಿ ಮೇಲ್ಸೇತುವೆ ಕಾಮಗಾರಿಯನ್ನು ತ್ವರಿತವಾಗಿ ಆರಂಭಿಸಿದರೆ, ಜನರಿಗೆ ಅನುಕೂಲವಾಗುತ್ತದೆ. ಹನುಮನ ಜನ್ಮಸ್ಥಳವಾದ ಅಂಜನಾದ್ರಿಯಿಂದ ಅಯೋಧ್ಯೆಗೆ ವಂದೇ ಭಾರತ್ ರೈಲಿನ ವ್ಯವಸ್ಥೆ ಮಾಡಿಕೊಡಬೇಕೆಂದು ಹೇಳಿದರು.

ಕರ್ನಾಟಕ ವಿಧಾನಸಭೆ ವಿರೋಧ ಪಕ್ಷದ ಮುಖ್ಯ ಸಚೇತಕರು ಹಾಗೂ ಕುಷ್ಟಗಿ ವಿಧಾನಸಭಾ ಕ್ಷೇತ್ರ ಶಾಸಕರಾದ ದೊಡ್ಡನಗೌಡ ಹನುಮಗೌಡ ಪಾಟೀಲ, ಕೊಪ್ಪಳ ಶಾಸಕರಾದ ಕೆ.ರಾಘವೇಂದ್ರ ಹಿಟ್ನಾಳ, ಗಂಗಾವತಿ ಶಾಸಕರಾದ ಜಿ.ಜನಾರ್ಧನ ರೆಡ್ಡಿ, ವಿಧಾನ ಪರಿಷತ್ ಸದಸ್ಯರಾದ ಹೇಮಲತಾ ನಾಯಕ ಅವರು ಕಾರ್ಯಕ್ರಮದಲ್ಲಿ ಮಾತನಾಡಿದರು.

ಸಚಿವರು ಕಾರ್ಯಕ್ರಮಕ್ಕೂ ಮುಂಚೆ ಶ್ರೀ ಗವಿಸಿದ್ದೇಶ್ವರ ಮಠಕ್ಕೆ ಭೇಟಿ ನೀಡಿದರು. ಕಾರ್ಯಕ್ರಮದ ನಂತರ ಕೊಪ್ಪಳ ರೈಲು ನಿಲ್ದಾಣದಲ್ಲಿ ನಡೆಯುತ್ತಿರುವ ಅಮೃತ ಭಾರತ್ ಸ್ಟೇಶನ್ ಕಾಮಗಾರಿಗಳ ಪರಿಶೀಲನೆ ನಡೆಸಿದರು.

ಕಾರ್ಯಕ್ರಮದಲ್ಲಿ ಕೊಪ್ಪಳ ನಗರಸಭೆ ಅಧ್ಯಕ್ಷರಾದ ಅಮಜದ್ ಪಟೇಲ್, ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀನಿವಾಸ ಗುಪ್ತಾ, ಮಾಜಿ ಸಂಸದ ಶಿವರಾಮೆಗೌಡ, ನೈರುತ್ಯ ರೈಲ್ವೆ ಹುಬ್ಬಳ್ಳಿಯ ವಿಭಾಗೀಯ ವ್ಯವಸ್ಥಾಪಕರಾದ ಬೇಲಾ ಮೀನಾ, ಕನ್‌ಸ್ಟ್ರಕ್ಷನ್ ಸಿಇಓ ಬೆಂಗಳೂರಿನ ಅಜಯ್ ಶರ್ಮಾ ಸೇರಿದಂತೆ ಇತರೆ ಜನಪ್ರತಿನಿಧಿಗಳು ಹಾಗೂ ರೈಲ್ವೆ ಇಲಾಖೆಯ ಅಧಿಕಾರಿಗಳು ಉಪಸ್ಥಿತರಿದ್ದರು.

## ಯುವ ಪ್ರತಿಭೆಗಳನ್ನು ಗುರುತಿಸಲು ಕ್ರೀಡಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ: ಸಂಸದ ಕೆ. ರಾಜಶೇಖರ ಹಿಟ್ನಾಳ

**ಕೊಪ್ಪಳ :** ದಕ್ಷಿಣ ಭಾರತದ ಕುಂಭಮೇಳ ಎಂದೆ ಪ್ರಸಿದ್ದವಾದ ಶ್ರೀ ಗವಿಸಿದ್ದೇಶ್ವರ ಜಾತ್ರೆಯ ಅಂಗವಾಗಿ ಯುವ ಪ್ರತಿಭೆಗಳನ್ನು ಗುರುತಿಸಲು ಮ್ಯಾರಥಾನ್ ಸೇರಿದಂತೆ ಹಲವಾರು ಕ್ರೀಡಾ ಕಾರ್ಯಕ್ರಮಗಳನ್ನು ಕೊಪ್ಪಳ ನಗರದಲ್ಲಿ ವಿವಿಧ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಕೊಪ್ಪಳ ಸಂಸದರಾದ ಕೆ. ರಾಜಶೇಖರ ಬಸವರಾಜ ಹಿಟ್ನಾಳ ಹೇಳಿದರು.

ಅವರು ಮಂಗಳವಾರ ಶ್ರೀ ಗವಿಸಿದ್ದೇಶ್ವರ ಜಾತ್ರೆಯ ಅಂಗವಾಗಿ ಕೊಪ್ಪಳ ನಗರದಲ್ಲಿ ವಿವಿಧ ಸಂಘ-ಸಂಸ್ಥೆಗಳ ಸಹಯೊಗದಲ್ಲಿ ಹಮ್ಮಿಕೊಳ್ಳಲಾಗಿದ್ದ ಮ್ಯಾರಥಾನ್ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ಈ ಕ್ರೀಡೆಗಳ ಆಯೋಜನೆಗೆ ಜಿಲ್ಲೆಯ ಜನಪ್ರತಿನಿಧಿಗಳು. ವಾಣಿಜ್ಯೋದ್ಯಮಿಗಳು ಹಾಗೂ ವಿವಿಧ ಸಂಘ- ಸಂಸ್ಥೆಯವರು ಸಹಕಾರ ನೀಡಿದ್ದಾರೆ. 15 ದಿನಗಳವರೆಗೆ ವಿವಿಧ ಕ್ರೀಡಾ ಕಾರ್ಯಕ್ರಮಗಳು ನಡೆಯಲಿವೆ. ಇದರ ಯಶಸ್ವಿಗೆ ಮಾಧ್ಯಮ ಪ್ರತಿನಿಧಿಗಳು ಎಲ್ಲಾ ಕಾರ್ಯಕ್ರಮಗಳ ಹೆಚ್ಚಿನ ಪ್ರಚಾರ ನೀಡುತ್ತಿದ್ದಾರೆ. ಎಲ್ಲರೂ ಸೇರಿ ಶ್ರೀ ಗವಿಸಿದ್ದೇಶ್ವರ ಜಾತ್ರೆಗೆ ಮೆರಗು ತರೋಣ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ವಿವಿಧ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳಿಗೆ ಅಭಿನಂದನೆಗಳು ಎಂದು ಹೇಳಿದರು.



ಮಾಜಿ ಸಂಸದರಾದ ಸಂಗಣ್ಣ ಕರಡಿ ಅವರು ಮಾತನಾಡಿ ಗವಿಸಿದ್ದೇಶ್ವರ ಜಾತ್ರೆಯ ಅಂಗವಾಗಿ ಕಳೆದ ಹತ್ತು ವರ್ಷಗಳಿಂದ ಮ್ಯಾರಥಾನ್ ಕಾರ್ಯಕ್ರಮ ಆಯೋಜನೆ ಮಾಡುತ್ತಾ ಬರಲಾಗುತ್ತಿದೆ. ಇದರಿಂದ ಎಲ್ಲಾ ಕ್ರೀಡಾ ಪಟುಗಳನ್ನು ಒಟ್ಟಿಗೆ ಸೇರಿಸಲು ಅನುಕೂಲವಾಗಲಿದೆ ಮತ್ತು ಕ್ರೀಡಾ ಪಟುಗಳು ಇದರಲ್ಲಿ ಭಾಗವಹಿಸುವುದರಿಂದ ಅವರ ಉತ್ಸಾಹ ಇಮ್ಮಡಿ ಆಗಲಿದೆ ಎಂದು ಹೇಳಿದರು

ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ರತ್ನಂ ಪಾಂಡೇಯ ಮಾತನಾಡಿ ಮೈಸೂರು ದಸರಾದಂತೆ ನಮ್ಮಲ್ಲಿಯೂ ಬರುವ ದಿನಗಳಲ್ಲಿ ದೊಡ್ಡ ಮಟ್ಟದಲ್ಲಿ ಕ್ರೀಡಾ ಕಾರ್ಯಕ್ರಮಗಳು ನಡೆಯಬೇಕು. ಕ್ರೀಡೆಯಿಂದ ಯುವಕರು ಮಾನಸಿಕ ಮತ್ತು ದೈಹಿಕವಾಗಿ ಸಬಲರಾಗುತ್ತಾರೆ. ಇಂದಿನ ಒತ್ತಡ ಜೀವನ ಬದುಕಿನಲ್ಲಿ ಕ್ರೀಡೆ ತುಂಭಾ ಅತ್ಯವಶ್ಯಕವಾಗಿದೆ ಎಂದು ಹೇಳಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಮ್ ಎಲ್. ಅರಸಿದ್ದಿ ಅವರು ಮಾತನಾಡಿ ಇಂದಿನ ಮ್ಯಾರಥಾನ್ ಕಾರ್ಯಕ್ರಮದಲ್ಲಿ ಹಲವಾರು ವಿದ್ಯಾರ್ಥಿಗಳು ಭಾಗವಹಿಸಿದ್ದು ಕ್ರೀಡೆ ಎಲ್ಲರಿಗೂ ಒಟ್ಟಿಗೆ ಸೇರಿಸುವದರ ಜೊತೆಗೆ ನಮ್ಮ ಆರೋಗ್ಯಕ್ಕೆ ಬಹಳ ಒಳ್ಳೆಯದು. ಇದರಲ್ಲಿ ಭಾಗವಹಿಸುವದು ಬಹಳ ಮುಖ್ಯವಾಗಿದೆ ಎಂದು ಹೇಳಿದರು

ಮ್ಯಾರಥಾನ್ ಓಟ ಹಳೆ ಆರ್.ಟಿ.ಓ ಕಛೇರಿ ಹತ್ತಿರದ ಕಿತ್ತೂರು ರಾಣಿ ಚೆನ್ನಮ್ಮ ವೃತ್ತದಿಂದ ಆರಂಭವಾಗಿ. ಗಂಜ ಸರ್ಕಲ್. ಅಶೋಕ ವೃತ್ತ. ಗಡಿಯಾರ ಕಂಬದ ಮಾರ್ಗವಾಗಿ ಗವಿಮಠದವರೆಗೆ ನಡೆಯಿತು. ಇದರಲ್ಲಿ ಭಾಗವಹಿಸಿ ಪ್ರಥಮ. ದ್ವಿತೀಯ. ತೃತೀಯ ಸೇರಿದಂತೆ ಒಟ್ಟು ಎಂಟು ಸ್ಥಾನ ಪಡೆದ ಅಭ್ಯರ್ಥಿಗಳಿಗೆ ಗವಿಮಠದಲ್ಲಿ ಪ್ರಶಸ್ತಿ ಫಲಕದ ಜೊತೆಗೆ ನಗದು ಬಹುಮಾನವನ್ನು ಗಣ್ಯರಿಂದ ವಿತರಿಸಲಾಯಿತು.

ಈ ಕಾರ್ಯಕ್ರಮದಲ್ಲಿ ಕೊಪ್ಪಳ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಕೆ. ಶ್ರೀನಿವಾಸ ಗುಪ್ತಾ. ಜಿಲ್ಲಾ ದೈಹಿಕ ಶಿಕ್ಷಣಾಧಿಕಾರಿ ಬಸವರಾಜ. ಕ್ರೀಡಾ ಇಲಾಖೆಯ ಅಧಿಕಾರಿ ವಿಠ್ಠಲ ಜಾಬಗೌಡರ, ಕೃಷ್ಣ ಇಟಂಗಿ ಸೇರಿದಂತೆ ವಿವಿಧ ಶಾಲಾ-ಕಾಲೇಜುಗಳ ಶಿಕ್ಷಕರು, ವಿದ್ಯಾರ್ಥಿಗಳು ಹಾಗೂ ಇತರೆ ಹಲವಾರು ಜನರು ಭಾಗವಹಿಸಿದ್ದರು.

## ಸೇವಾ ನ್ಯೂನತೆ: ಎಲೆಕ್ಟ್ರಿಕ್ ವಾಹನ ಖರೀದಿ ಮೊತ್ತ ಪಾವತಿಸಲು ಆದೇಶ

**ಕೊಪ್ಪಳ :** ಸೇವಾ ನ್ಯೂನತೆ ಹಿನ್ನೆಲೆಯಲ್ಲಿ ಫಿರ್ಯಾದುದಾರ ಗ್ರಾಹಕರಿಗೆ ವಾಹನ ಖರೀದಿ ಮೊತ್ತ ಪಾವತಿಸುವಂತೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ಓಲಾ ಎಲೆಕ್ಟ್ರಿಕ್ ವಾಹನ ಮಾರಾಟಗಾರರಿಗೆ ಆದೇಶಿಸಿದೆ.

ಗ್ರಾಹಕ ಫಿರ್ಯಾದು ಸಂಖ್ಯೆ: 57/2024 ರಲ್ಲಿನ ಅಂತಿಮ ತೀರ್ಪಿನ ಸಾರಾಂಶದ ಅನ್ವಯ ಫಿರ್ಯಾದುದಾರರಾದ ಕೊಪ್ಪಳ ಜಿಲ್ಲೆಯ ಹಲಗೇರಿಯ ಗೋಪಾಲ ತಂದೆ ನಿಂಗಪ್ಪ ಇವರು ಎದುರುದಾರರಾದ ಮಾಲೀಕರು ಓಲಾ ಎಲೆಕ್ಟ್ರಿಕ್ ವಾಹನ ಮಾರಾಟಗಾರರು, ಗದಗ ರೋಡ್ ಕೊಪ್ಪಳ, ರವರ ವಿರುದ್ಧ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದಲ್ಲಿ ದೂರನ್ನು ನೀಡಿರುತ್ತಾರೆ.

ಈ ದೂರಿನ ಸಾರಂಶ ಏನೆಂದರೆ, ದೂರುದಾರನು ಎದುರುದಾರರಲ್ಲಿ ಎಲೆಕ್ಟ್ರಿಕ್ ವಾಹನವನ್ನು ಖರೀದಿಸುವ ಸಲುವಾಗಿ 2023ರ ಡಿಸೆಂಬರ್ 27 ರಂದು 1,04,303 ರೂ.ಗಳನ್ನು ಪಾವತಿಸಿರುತ್ತಾರೆ. ಎದುರುದಾರರು ಹಣ ಪಡೆದ 30 ದಿನಗಳಲ್ಲಿ ಓಲಾ ಎಲೆಕ್ಟ್ರಿಕ್ ವಾಹನವನ್ನು ನೀಡುವುದಾಗಿ ಭರವಸೆಯನ್ನು ಕೊಟ್ಟಿದ್ದರೂ ವಾಹನವನ್ನು ನೀಡಿರುವುದಿಲ್ಲ. ದೂರುದಾರರು ಎದುರುದಾರರಿಗೆ ತಮ್ಮ ವಕೀಲರ ಮೂಲಕ ವಾಹನವನ್ನು ನೀಡುವಂತೆ ಅಥವಾ ವಾಹನಕ್ಕೆ ಪಾವತಿಸಿದ ಮೊತ್ತವನ್ನು ಹಿಂದಿರುಗಿಸುವಂತೆ ನೋಟಿಸನ್ನು ನೀಡಿದಾಗ್ಯೂ ಸಹ ಸ್ಪಂದಿಸದೇ ನಿರ್ಲಕ್ಷ ತೋರಿ ಸೇವಾ ನ್ಯೂನತೆ ಎಸಗಿರುತ್ತಾರೆ. ಅದ್ದರಿಂದ ದೂರುದಾರರು ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರನ್ನು ಸಲ್ಲಿಸಿರುತ್ತಾರೆ.

ಈ ದೂರನ್ನು ದಾಖಲಿಸಿಕೊಂಡ ಕೊಪ್ಪಳ ಜಿಲ್ಲಾ ಆಯೋಗದ ಅಧ್ಯಕ್ಷರಾದ ಜಿ.ಇ.ಸೌಭಾಗ್ಯಲಕ್ಷ್ಮೀ ಹಾಗೂ ಸದಸ್ಯರಾದ ರಾಜು.ಎನ್.ಮೇತ್ರಿ ರವರು ವಾದ ಪ್ರತಿವಾದಗಳನ್ನು ಆಲಿಸಿ, ಎದುರುದಾರರಿಂದ ಉಂಟಾದ ಸೇವಾ ನ್ಯೂನತೆಗಾಗಿ ಹಾಗೂ ಅನುಚಿತ ವ್ಯಾಪಾರ ಪದ್ಧತಿಗಾಗಿ ಎದುರುದಾರರು ದೂರುದಾರರಿಂದ ಪಡೆದ ವಾಹನ ಖರೀದಿ ಮೊತ್ತ 1,04,303 ರೂ.ಗಳನ್ನು 2023ರ ಡಿಸೆಂಬರ್ 27 ರಿಂದ ಪಾವತಿಯಾಗುವವರೆಗೆ ವಾರ್ಷಿಕ ಶೇ.6ರ ಬಡ್ಡಿ ಸಮೇತ ದೂರುದಾರರಿಗೆ ನೀಡುವಂತೆ ಆದೇಶಿಸಿರುತ್ತಾರೆ ಹಾಗೂ ದೂರುದಾರರಿಗೆ ಉಂಟಾದ ಮಾನಸಿಕ ಯಾತನೆಗಾಗಿ 10,000 ರೂ. ಗಳನ್ನು ಹಾಗೂ ದೂರಿನ ಖರ್ಚು 5000 ರೂ.ಗಳನ್ನು ಈ ಆದೇಶದ ದಿನಾಂಕದಿಂದ 45 ದಿನಗಳ ಒಳಗಾಗಿ ಎದುರುದಾರರು ದೂರುದಾರರಿಗೆ ಪಾವತಿಸುವಂತೆ ಆದೇಶವನ್ನು ನೀಡಿರುತ್ತಾರೆ ಎಂದು ಕೊಪ್ಪಳ ಜಿಲ್ಲಾ ಗ್ರಾಹಕರ ಆಯೋಗದ ಸಹಾಯಕ ರಿಜಿಸ್ಟ್ರಾರ ಹಾಗೂ ಸಹಾಯಕ ಆಡಳಿತಾಧಿಕಾರಿ ಪಿ.ಎಸ್ ಅಮರದೀಪ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಬಸವೇಶ್ವರ ಮೂರ್ತಿ ಭಗ್ನಗೊಳಿಸಿದ ಕಿಡಿಗೇಡಿಗಳ ಬಂಧನಕ್ಕೆ ಆಗ್ರಹ.: ಬಸವರಾಜ್ ಮರೆ



**ಭಾಲ್ಕಿ :** ಭಾಲ್ಕಿ ತಾಲೂಕಿನ ದಾಡಗಿ ಕ್ರಾಸ್ ಬಳಿ ಬಸವೇಶ್ವರ ಮೂರ್ತಿಯನ್ನು ಭಗ್ನಗೊಳಿಸಿದ ಕಿಡಿಗೇಡಿಗಳನ್ನು ಕೂಡಲೇ ಬಂಧಿಸಿ ಸೂಕ್ತ ಕ್ರಮ ಜರುಗಿಸಬೇಕೆಂದು ಜಾಗತಿಕ ಲಿಂಗಾಯತ ಮಹಾಸಭೆಯ ತಾಲೂಕ ಅಧ್ಯಕ್ಷ ಬಸವರಾಜ ಮರೆ ಆಗ್ರಹಿಸಿದ್ದಾರೆ. ಕಿಡಿಗೇಡಿಗಳ ಈ ಕೃತ್ಯ ಖಂಡನೀಯ. ಸಮಾನತೆ, ಕಾಯಕವೇ ಕೈಲಾಸ ಎಂಬ ತತ್ವದಡಿಯಲ್ಲಿ ಸಮಾಜವನ್ನು ಬಸವೇಶ್ವರರು ನಿರ್ಮಿಸಿದವರು. ಜಾತಿ, ಮತ, ಲಿಂಗಗಳನ್ನು ತಿರಸ್ಕರಿಸಿ ಸಮಾನತೆಯನ್ನು ಪ್ರತಿಪಾದಿಸಿದ ಮಹಾನುಭಾವರು. ಜಾತ್ಯತೀತತೆ ರಾಷ್ಟ್ರವಾದ ನಮ್ಮ ದೇಶದಲ್ಲಿ ಸಾಧು,ಸಂತರ, ಶರಣರ ,ಮಹಾತ್ಮರು ಹಾಗೂ ಸಾಧಕರ ಪ್ರತಿಮೆಗಳಿಗೆ ಅವಮಾನ ಎಸಗುತ್ತಿರುವ ಇಂತಹ ದುಷ್ಟರನ್ನು ಬಂಧಿಸಿ ಅವರ ವಿರುದ್ಧ ಕಾನೂನು ರೀತಿ ಶಿಕ್ಷೆಗೆ ಗುರಿಪಡಿಸಬೇಕೆಂದು ಬಸವರಾಜ್ ಮರೆ ಅವರು ಒತ್ತಾಯಿಸಿದರು.

## ಜಮಖಂಡಿ ಪಿ.ಕೆ.ಪಿ.ಎಸ್.ಗೆ ಗಂಗರಾಜು ಅಧ್ಯಕ್ಷರಾಗಿ ಆಯ್ಕೆ

**ಜಮಖಂಡಿ :** ನಗರದ ಪಿಕೆಪಿಎಸ್ ಸೊಸೈಟಿ ಅಧ್ಯಕ್ಷ ಮತ್ತು ಉಪಾಧ್ಯಕ್ಷರ ಚುನಾವಣೆ ಜರುಗಿತು. ನೂತನ ಅಧ್ಯಕ್ಷರಾಗಿ ಗಂಗರಾಜು ಪಾಣಿ, ಉಪಾಧ್ಯಕ್ಷರಾಗಿ ಶ್ರೀಶೈಲ ಸನದಿ ಅವಿರೋಧವಾಗಿ ಆಯ್ಕೆಗೊಂಡರು.

ನೂತನ ಅಧ್ಯಕ್ಷ ಗಂಗರಾಜು ಪಾಣಿ ಮಾತನಾಡಿ, ಪಾರದರ್ಶಕ ಸೇವೆಗಳನ್ನು ನೀಡುವ ಗುಣಮಟ್ಟದ ವ್ಯವಸ್ಥೆಗೆ ಆದ್ಯತೆ ನೀಡಲಾಗುವದು. ಗ್ರಾಹಕರಿಗೆ ಉತ್ತಮ ಸೇವೆಗಳನ್ನು ನೀಡುವ ಮೂಲಕ ದುಡಿಯುವ ಬಂಡವಾಳ ಹೆಚ್ಚಿಸುವ ಯೋಜನೆಗಳನ್ನು ಹಮ್ಮಿಕೊಳ್ಳಲಾಗುವದು. ಸಂಸ್ಥೆಯ ನಿರ್ದೇಶಕರೊಂದಿಗೆ ಹೊಸ ಯೋಜನೆಗಳನ್ನು ಅನುಷ್ಠಾನ ಗೊಳಿಸಲಾಗುವದು. ಪ್ರತಿಯೊಬ್ಬರ ಸಹಕಾರದೊಂದಿಗೆ ಸಂಸ್ಥೆಯ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಲಾಗುವುದು ಎಂದರು.



ನಿರ್ದೇಶಕರಾದ ಹಣಮಂತ ತುಪ್ಪದ, ಮಲ್ಲಪ್ಪ ವಾಳೆನ್ನವರ, ನಂದೆಪ್ಪ ನ್ಯಾಮಗೌಡ, ಸಚಿನ ಶಿಂಧೆ, ತಿಪ್ಪಣ್ಣ ಮೈಗೂರ, ಶ್ರೀರಾಮ ಸವಣೂರ, ರಾಯಗೌಡ ನ್ಯಾಮಗೌಡ, ಅರುಣಾ ಕಟಗಿ, ಮೀನಾಕ್ಷಿ ಮಾನೆ, ಚುನಾವಣಾಧಿಕಾರಿ ಸಚಿನ ಚಿನಗುಂಡಿ, ಕಾರ್ಯನಿರ್ವಾಹಕ ಅಧಿಕಾರಿ ನಾಗಪ್ಪ ತುಪ್ಪದ, ಪ್ರಕಾಶ ಮೀಸಿ, ಸಂಗಪ್ಪ ದಡ್ಡಿಮನಿ, ಮಹಾದೇವ ಕಡಕೋಳ, ಚನಬಸು ಗುಣದಾಳ,

ಮಹಾದೇವ ಕಲೂತಿ, ಸಮೀರ ಕಂಗನೊಳ್ಳಿ, ಪ್ರೇಮ ಬಳೋಲಗಿಡದ, ಕೆ. ಕೆ. ತುಪ್ಪದ, ಸಿದ್ರಾಮ ಜಂಬಗಿ, ವಿರುಪಾಕ್ಷಪ್ಪ ಹಲ್ಯಾಳ, ಮಲ್ಲಿಕಾರ್ಜುನ ನಿಂಗನೂರ, ಚನಬಸು ತೆಲಬಕ್ಕನವರ, ರೇವಣೆಪ್ಪ ತೆಲಬಕ್ಕನವರ, ನಂದೆಪ್ಪ ನ್ಯಾಮಗೌಡ ಸಹಿತ ಹಲವರು ಹಾಜರಿದ್ದರು.

ಈ ಸಂದರ್ಭದಲ್ಲಿ ನೂತನ ಅಧ್ಯಕ್ಷ ಗಂಗರಾಜು ಪಾಣಿ, ಉಪಾಧ್ಯಕ್ಷ ಶ್ರೀಶೈಲ ಸನದಿ ಅವರನ್ನು ನಗರದ ಹಿರಿಯರು, ಸಂಘ-ಸಂಸ್ಥೆಗಳು, ವಿವಿಧ ಸಂಘಟನೆ ಕಾರ್ಯಕರ್ತರು ಸತ್ಕರಿಸಿದರು.

## ಸಂಗೊಳ್ಳಿ ರಾಯಣ್ಣ ಉತ್ಸವ ಉದ್ಘಾಟನೆ

**ಬೈಲಹೊಂಗಲ :** 'ಸಂಗೊಳ್ಳಿ ರಾಯಣ್ಣನ ಹುಟ್ಟೂರಿನಲ್ಲಿ ರಾಯಣ್ಣನ ಹೆಸರಿನಲ್ಲಿ ಅಂತರರಾಷ್ಟ್ರೀಯ ಮಟ್ಟದ ಸೈನಿಕ ಶಾಲೆ, ರಾಕ್ ಗಾರ್ಡನ್ ನಿರ್ಮಿಸಿದ ಕೀರ್ತಿ ಮುಖ್ಯಮಂತ್ರಿ ಸಿದ್ಧರಾಮಯ್ಯ ಅವರಿಗೆ ಸಲ್ಲುತ್ತದೆ' ಎಂದು ಶಾಸಕ ಮಹಾಂತೇಶ ಕೌಜಲಗಿ ಹೇಳಿದರು.

ತಾಲ್ಲೂಕಿನ ಸಂಗೊಳ್ಳಿ ಗ್ರಾಮದಲ್ಲಿ ಬೆಳಗಾವಿ ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಗೊಳ್ಳಿ ರಾಯಣ್ಣ ಉತ್ಸವ ಸಮಿತಿ ವತಿಯಿಂದ ಭಾನುವಾರ ನಡೆದ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಉತ್ಸವ 2025 ರ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

ಈ ಭಾಗದ ರೈತರ ಅನುಕೂಲಕ್ಕಾಗಿ 9 ಏತ ನೀರಾವರಿಗಳಿಗೆ 100 ಕೋಟಿ ಅನುದಾನ ಮಂಜೂರಾಗಿ ಟೆಂಡರ್ ಕರೆಯಲಾಗಿದೆ. ಇತಿಹಾಸ. ನೀಡಿದ ಎಲ್ಲ ಆಶ್ವಾಸನೆಗಳನ್ನು ಮುಖ್ಯಮತ್ರಿಗಳು ಈಡೇರಿಸಿದ್ದಾರೆ.ಸಂಗೊಳ್ಳಿ, ಬೇವಿನಕೊಪ್ಪ ಸೇತುವೆ ನಿರ್ಮಾಣ ಹಂತದಲ್ಲಿದ್ದು, ಹೆಚ್ಚುವರಿಯಾಗಿ 10 ಕೋಟಿ ರೂ. ಅನುದಾನ ಒದಗಿಸಲಾಗಿದೆ. ಉತ್ಸವಗಳು ಯುವಕರಿಗೆ ಸ್ಪೂರ್ತಿ ಆಗುವ ನಿಟ್ಟಿನಲ್ಲಿ ಉತ್ಸವ ಆಚರಿಸಲಾಗುತ್ತಿದೆ. ಬೈಲಹೊಂಗಲ ನಾಡು ವೀರರ ನಾಡಾಗಿದ್ದು, ಉತ್ಸವಗಳ ತವರೂರಾಗಿದೆ ಎಂದರು.



ಕಿತ್ತೂರು ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಸಾನ್ನಿಧ್ಯವಹಿಸಿ ಮಾತನಾಡಿ, ಪುಟ್ಟ ಸಂಗೊಳ್ಳಿ ಗ್ರಾಮವು ದೇಶದಾದ್ಯಂತ ಮಿಂಚಲು ರಾಯಣ್ಣನ ಶೌರ್ಯ ಕಾರಣವಾಗಿದೆ ಎಂದರು.

ಬೆಳಗಾವಿ ವಿಮಾನ ನಿಲ್ದಾಣಕ್ಕೆ ಚನ್ನಮ್ಮ, ಹುಬ್ಬಳ್ಳಿ ವಿಮಾನ ನಿಲ್ದಾಣಕ್ಕೆ ರಾಯಣ್ಣನ ಹೆಸರಿಡಬೇಕು. ದೆಹಲಿಯ ಪಾರ್ಲಿಮೆಂಟ್ ಎದುರು ಸಂಗೊಳ್ಳಿ ರಾಯಣ್ಣನ ಪ್ರತಿಮೆ ಪ್ರತಿಷ್ಠಾಪಿಸಿ ರಾಯಣ್ಣನಿಗೆ ಗೌರವ ಸಲ್ಲಿಸಬೇಕು ಎಂದರು.

ಸಂಗೊಳ್ಳಿ ಗುರುಲಿಂಗ ಸಿದ್ದಲಿಂಗೇಶ್ವರ ಸಂಸ್ಥಾನ ಹಿರೇಮಠದ ಗುರುಲಿಂಗ ಶಿವಾಚಾರ್ಯ ಸ್ವಾಮೀಜಿ, ಮಾತನಾಡಿ, ರಾಯಣ್ಣನ ಗ್ರಾಮವನ್ನು ಇನ್ನಷ್ಟು ಅಭಿವೃದ್ಧಿಪಡಿಸಬೇಕು. ಗ್ರಾಮದ ಗ್ರಾಮದೇವತೆ ದೇವಸ್ಥಾನ ಅಭಿವೃದ್ಧಿ ಪಡಿಸಲಾಗುತ್ತಿದ್ದು, ಶಾಸಕರು ಅನುದಾನ ಒದಗಿಸಬೇಕು. ರಾಯಣ್ಣನ ಶೌರ್ಯ, ದೇಶಪ್ರೇಮ ಸದಾ ನಾಡಿಗೆ ಸ್ಪೂರ್ತಿ ಎಂದರು.

ಉಪವಿಭಾಗಾಧಿಕಾರಿ ಪ್ರಭಾವತಿ ಫಕೀರಪೂರ ಮಾತನಾಡಿ, ಸರ್ಕಾರ ಸಂಗೊಳ್ಳಿ ರಾಯಣ್ಣನ ಉತ್ಸವವನ್ನು ಅರ್ಥಪೂರ್ಣವಾಗಿ ಆಚರಿಸಲು ಶ್ರಮಿಸಿದೆ. ಮುಂದಿನ ದಿನಗಳಲ್ಲಿ ಉತ್ಸವವನ್ನು ಇನ್ನೂ ಹೆಚ್ಚಿನ ರೀತಿಯಲ್ಲಿ ವಿಜೃಂಭಣೆಯಿಂದ ಆಚರಿಸಲಾಗವದು ಎಂದರು.

ಡಿವೈಎಸ್‌ಪಿ ರವಿ ನಾಯ್ಕ, ತಹಶೀಲ್ದಾರರಾದ ಎಚ್.ಎನ್.ಶಿರಹಟ್ಟಿ, ಮಲ್ಲಿಕಾರ್ಜುನ ಹೆಗ್ಗನ್ನವರ, ರವೀಂದ್ರ ಹಾದಿಮನಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ವಿದ್ಯಾವತಿ ಭಜಂತ್ರಿ, ತಾಪಂ ಇಒ ಕಿರಣ ಘೋರ್ಪಡೆ, ಪಿಡಿಒ ಅಡಿವೆಪ್ಪ ತಳವಾರ, ಗ್ರಾಮ ಪಂಚಾಯಿತಿ ಅಧ್ಯಕ್ಷೆ ರೂಪಾ ಚಚಡಿ, ಉಪಾಧ್ಯಕ್ಷ ಫಕೀರಪ್ಪ ಕುರಿ ವೇದಿಕೆಯಲ್ಲಿ ಇದ್ದರು. ತಹಶೀಲ್ದಾರ ಚಿಕ್ಕಪ್ಪ ನಾಯ್ಕ ಸ್ವಾಗತಿಸಿದರು. ಗ್ರಾಮಸ್ಥರು ಇದ್ದರು.

## ಜ.24 ರಂದು ಸನ್ನತಿ ಪಂಚಶೀಲ ಪಾದಯಾತ್ರೆ ಸಮಾರೋಪ: ಯಲ್ಲಪ್ಪ ಬಳಗಾನೂರ



**ಕೊಪ್ಪಳ :** ಬೌದ್ಧ ಐತಿಹಾಸಿಕ ಕ್ಷೇತ್ರ ಸನ್ನತಿ ಅಭಿವೃದ್ಧಿ ಮಂಡಳಿ ಪೂರ್ಣ ಪ್ರಮಾಣದಲ್ಲಿ ರಚಿಸಿ, ಆಂದ್ರಪ್ರದೇಶದ ಬುದ್ಧವನ ಮಾದರಿಯಲ್ಲಿ ಅಭಿವೃದ್ಧಿ ಪಡಿಸಲೂ ಆಗ್ರಹಿಸಿ ಮತ್ತು ಬೌದ್ಧ ಸಮುಸಾಯದ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ನಾಡಿನ ಬಿಕ್ಕು ಮತ್ತು ಬಿಕ್ಕುಣಿ ಸಂಘದ ಪೂಜ್ಯ ಭಂತೆ ಭೋಧಿದತ್ತ ಇವರ ನೇತೃತ್ವದಲ್ಲಿ ನವೆಂಬರ್ 15 ಸನ್ನತಿಯಿಂದ ಪ್ರಾರಂಭವಾದ ಪಂಚಶೀಲ ಪಾದಯಾತ್ರೆ ಬೆಂಗಳೂರಿನ ಫ್ರೀಡಂ ಪಾರ್ಕ್ ತಲುಪಿ ಬಹಿರಂಗ ಸಭೆಯಲ್ಲಿ ಸಮಾರೋಪ ಗೊಳ್ಳುವುದು ಎಂದುಸನ್ನತಿಪಂಚಶೀಲಪಾದಯಾತ್ರೆಸಮಾರೋಪ ಸಮಾರಂಭದ ಸಂಘಟನಾ ಸಮಿತಿ ಕೊಪ್ಪಳ ಜಿಲ್ಲೆಯ ಸಂಚಾಲಕ ಯಲ್ಲಪ್ಪ ಬಳಗಾನೂರ ಹೇಳಿದರು.

ಅವರು ಶುಕ್ರವಾರದಂದು ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ, ಉದ್ದೇಶಿಸಿ ಮಾತನಾಡಿ ರಾಜ್ಯದಲ್ಲಿ ಇರುವ ಸಾಮ್ರಾಟ್ ಅಶೋಕರ ಶಿಲಶಾಸನಗಳಿಗೆ ಬೇಟಿ ನೀಡುತ್ತಾ, ಮತ್ತು ಅಲ್ಲಿಯ ಅವಶ್ಯಕತೆಗಳ ಬಗ್ಗೆ ಸಂಕ್ಷಿಪ್ತವಾಗಿ ಅದ್ಯಾಯನ ಮಾಡುತ್ತಾ ಕಲಬುರ್ಗಿ, ಯಾದಗಿರಿ, ರಾಯಚೂರು, ಕೊಪ್ಪಳ, ವಿಜಯ ನಗರ,ಬಳ್ಳಾರಿ, ಚಿತ್ರದುರ್ಗಾ, ತುಮಕೂರು, ಬೆಂಗಳೂರು ಗ್ರಾಮಾಂತಾರ ಜಿಲ್ಲೆಗಳಲ್ಲಿ ಸುಮಾರು 800 ಕಿ.ಮೀ ಕ್ಕೂ ಹೆಚ್ಚು ಸಂಚರಿಸಿ ನೂರಾರು ಗ್ರಾಮಗಳಲ್ಲಿ ವಾಸ್ತವ್ಯಮಾಡಿ, ಧಮ್ಮ ಸಂದೇಶ ನೀಡಿ, ಬೌದ್ಧ ಸಮುದಾಯದ ಬೇಡಿಕೆಗಳ ಈಡೇರಿಕೆಗೆ ಜನಜಾಗೃತಿ ಮೂಡಿಸುತ್ತಾ ಆಯ್ದ ಸ್ಥಳಗಳಲ್ಲಿ ಧಮ್ಮಾ ದೀಕ್ಷಾ ನೀಡುತ್ತಾ ಮುಂದುವರೆದು ಜನವರಿ 23 ರಂದು ಯಶವಂತಪೂರ ಮಾರ್ಗವಾಗಿ ಡಾ.ಬಿ.ಆರ್ ಅಂಬೇಡ್ಕರ್ ರವರ ಕನಸಿನ ದಕ್ಷಿಣ ಭಾರತ ಧಮ್ಮ ಕೇಂದ್ರವಾದ ನಾಗಸೇನ ಬುದ್ಧವಿಹಾರ ಸದಾಶಿವ ನಗರ ತಲುಪಿ ವಾಸ್ತವ್ಯ ಮಾಡಲಾಗುವದು ನಂತರ ಬೆಂಗಳೂರು ಫ್ರೀಡಮ್ ಪಾರ್ಕ ತಲುಪಲಿದೆ.

ವಿವಿಧ ಬೇಡಿಕೆಗಳಾದ ಪರಿಶಿಷ್ಟ ಜಾತಿಯ ಬೌದ್ಧರ ಸಾಮಾಜಿಕ,ಆರ್ಥಿಕಅಭಿವೃದ್ಧಿಗಾಗಿಕರ್ನಾಟಕಬೌದ್ಧ ಅಭಿವೃದ್ಧಿ ನಿಗಮ ಸ್ಥಾಪನೆ ಮಾಡಬೇಕು,ಬೌದ್ಧರ ಸರ್ವಾಂಗಣ ಅಭಿವೃದ್ಧಿ ಹಾಗೂ ಬೌದ್ಧ ಕ್ಷೇತ್ರಗಳ ಅಭಿವೃದ್ಧಿಗಾಗಿ ಕನಿಷ್ಠ 1 ಸಾವಿರ ಕೋಟಿ ಅನುದಾನ ಈ ಬಜೆಟ್‌ನಲ್ಲಿ ಒದಗಿಸಬೇಕು,ಪ್ರತಿ ವರ್ಷ ಮಹಾತ್ಮ ಗೌತಮ್ ಬುದ್ಧ ಜಯಂತಿಗೆ ಸಾರ್ವತ್ರಿಕ ರಜೆ ಘೋಷಣೆ ಮಾಡಬೇಕು,ಬೋಧಗಯ ಟೆಂಪಲ್ ಆಕ್ಟ್ 1949 ರನ್ನು ರದ್ದುಗೊಳಿಸಿ ಬುದ್ಧ ಗಯಾದ ಮಹಾಬೋಧಿ, ಮಹಾ ವಿಹಾರದ ಆಡಳಿತವನ್ನು ಸಂಪೂರ್ಣವಾಗಿ ಬೌದ್ಧರಿಗೆ ನೀಡಬೇಕೆಂದು ಕೇಂದ್ರ ಸರ್ಕಾರಕ್ಕೆ ಮತ್ತು ಬಿಹಾರ ಸರಕಾರಕ್ಕೆ ಸೂಕ್ತ ಶಿಫಾರಸ್ಸು ಮಾಡಬೇಕು, ಕನಾಟಕ ಸರಕಾರ ಪ್ರತಿ ವರ್ಷ ಫೆಬ್ರುವರಿ 12 ರಂದು ಸಾಮ್ರಾಟ್ ಅಶೋಕ ಸನ್ನತಿ ಉತ್ಸವವನ್ನು ಸರಕಾರದ ವತಿಯಿಂದ ಆಚರಣೆ ಮಾಡಬೇಕು ಸೇರಿದಂತೆ ವಿಧ ಬೇಡಿಕೆಗಳಿಗೆ ಮುಖ್ಯಮಂತ್ರಿಗೆ ಮನವಿ ಸಲ್ಲಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಮಾರ್ಕಂಡಪ್ಪ ಬೆಲ್ಲದ್, ರಘು ಬೆಲ್ಲದ್, ರಘು ಚಾಕ್ರಿ ಉಪಸ್ಥಿತರಿದ್ದರು.

## ರೈಲ್ವೆ ಸ್ಟೇಷನ್ ರಸ್ತೆ ಕಾಮಗಾರಿ ಪಟೇಲರಿಂದ ವೀಕ್ಷಣೆ



**ಕೊಪ್ಪಳ :** ನಗರದ ರೈಲು ನಿಲ್ದಾಣಕ್ಕೆ ಹೋಗುವ ರಸ್ತೆ ಡಾಂಬರೀಕರಣ ಕಾಮಗಾರಿ ಬರದಿಂದ ಸಾಗಿದ್ದು ಸದರಿ ಕಾಮಗಾರಿ ಸ್ಥಳಕ್ಕೆ ಶುಕ್ರವಾರ ಮಧ್ಯಾನ ದಿಡೀರ್ ಭೇಟಿ ನೀಡಿದ ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ರವರು ಕಾಮಗಾರಿ ಗಳ ಗುಣಮಟ್ಟ ವೀಕ್ಷಿಸಿದರು ತ್ವರಿತಗತಿ ಯಲ್ಲಿ ಕಾಮಗಾರಿ ಪೂರ್ಣಗೊಳಿಸಲಾಗುವುದು ಮತ್ತು ಸಾರ್ವಜನಿಕರಿಗೆ ಅನುಕೂಲತೆ ದೊರಕಿಸಿಕೊಡಲಾಗುವುದು ಎಂದು ಕೊಪ್ಪಳ ನಗರಸಭೆ ಅಧ್ಯಕ್ಷ ಪಟೇಲ್ ತಿಳಿಸಿದರು ಈ ಸಂದರ್ಭದಲ್ಲಿ ಅವರೊಂದಿಗೆ ಕಾರ್ಯಕರ್ತರು ಮತ್ತು ಅಭಿಮಾನಿಗಳು ಪಾಲ್ಗೊಂಡಿದ್ದರು.

"SIHI KAHI" Kannada Daily Morning, Editor, Owner, Publisher, Printer by **MARUTI BASAVANTAPPA HOASAMANI** Published from Chittaragi Cross, S.C. Colony, Ward No. 9, Amingada-587112, Tq. Hungund Dist : Bagalkot, Karnataka and Printed at **SUDIN PRINTERS**, Sector No. 33, Shop No. 38 & 40, Opp. Ambedkar Bhavan, **NAVANAGAR, BAGALKOT-587 101.** Dist : Bagalkot, Karnataka State